ಸಂಪುಟ : 9 ಸಂಚಿಕೆ 178 ಪುಟ : 4 ಬೆಲೆ: 3.00 ಬುಧವಾರ ಆಗಸ್ಟ್ 21 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 178 Pages : 4 Price : 3.00 Wednesday August 21 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಪಡಿತರ ಚೀಟಿ: ಇ-ಕೆವೈಸಿ ಕಡ್ಡಾಯ

■ವಿಜಯಸಾಕ್ಷಿ ಸುದ್ದಿ, ಗದಗ


ಪಡಿತರ ಚೀಟಿ ಹೊಂದಿರುವ ಕುಟುಂಬ ಸದಸ್ಯರ ಇ-ಕೆವೈಸಿಯನ್ನು ಆಗಸ್ಟ್ 31ರೊಳಗೆ ಶೇ. 100ರಷ್ಟನ್ನು ಸಂಪೂರ್ಣಗೊಳಿಸಬೇಕಾಗಿರುವುದರಿಂದ ಎಲ್ಲ ಪಡಿತರ ಚೀಟಿದಾರರು ಹಾಗೂ ಕುಟುಂಬ ಸದಸ್ಯರು ಆಗಸ್ಟ್ 31ರೊಳಗಾಗಿ ತಮ್ಮ ತಮ್ಮ ನ್ಯಾಯಬೆಲೆ ಅಂಗಡಿಗೆ ತೆರಳಿ ಕಡ್ಡಾಯವಾಗಿ ಇಕೆವೈಸಿಯನ್ನು ಮಾಡಿಸಲು ತಿಳಿಸಲಾಗಿದೆ.

ಇ-ಕೆವೈಸಿ ಮಾಡಿಸಲು ಬಾಕಿ ಉಳಿದಿರುವ ಪಡಿತರ ಚೀಟಿಯಲ್ಲಿನ ಸದಸ್ಯರು ಊರಲ್ಲಿ ಇಲ್ಲದೇ ಇದ್ದ ಸಂದರ್ಭದಲ್ಲಿ ಪಡಿತರ ಚೀಟಿಯ ಸಂಖ್ಯೆ, ಆಧಾರ್ ಕಾರ್ಡ್‌ನೊಂದಿಗೆ ಕರ್ನಾಟಕ ರಾಜ್ಯದ ಯಾವುದೇ ಜಿಲ್ಲೆ, ತಾಲೂಕು, ಗ್ರಾಮದಲ್ಲಿರುವ ನ್ಯಾಯ ಬೆಲೆ ಅಂಗಡಿಗಳಲ್ಲಿ ಇ-ಕೆವೈಸಿ ಮಾಡಿಸಿಕೊಳ್ಳಲು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸಿಎಂ ಸಿದ್ದರಾಮಯ್ಯ, ಸಾರಿಗೆ ಸಚಿವ ರಾಮಲಿಂಗರೆಡ್ಡಿ, ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲರಿಗೆ ಮಾಜಿ ಕ್ರಿಕೆಟಿಗ ಜೋಶಿ ಮನವಿ**

## ಗದಗ-ಬೆಂಗಳೂರು ವೋಲ್ವೊ ಬಸ್ ಸೇವೆ ಪುನಾರಂಭಗೊಳಿಸಿ

■ವಿಜಯಸಾಕ್ಷಿ ಸುದ್ದಿ, ಗದಗ



ಗದಗ ಬೆಂಗಳೂರು ವೋಲ್ವೊ ಬಸ್ ಸೇವೆ ಪುನಾರಂಭಗೊಳಿಸಿ ಎಂದು ಟೀಂ ಇಂಡಿಯಾ ಮಾಜಿ ಕ್ರಿಕೆಟಿಗ ಸುನೀಲ್ ಜೋಶಿ ಮನವಿ ಮಾಡಿದ್ದಾರೆ.

ಎಕ್ಸ್ ಖಾತೆಯ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ವರಿಗೆ ಮನವಿ ಮಾಡಿದ್ದಾರೆ. ಈ ಹಿಂದೆ ಸುನೀಲ್ ಜೋಶಿ ಅವರ ಮನವಿ ಮೇರೆಗೆ ಸಾರಿಗೆ ಇಲಾಖೆ ಗದಗ-ಟು ಬೆಂಗಳೂರು ಸ್ಲೀಪರ್ ಬಸ್ ಸೇವೆ ಆರಂಭಿಸಿತ್ತು. ಆದರೆ ಈಗ ಅದರ ಸೇವೆ ಸ್ಥಗಿತಗೊಂಡಿದ್ದು ಪುನರಾರಂಭಗೊಳಿಸುವಂತೆ ಜೋಶಿ ಮನವಿ ಮಾಡಿದ್ದಾರೆ.

2023ರಲ್ಲೂ ಸುನೀಲ್ ಜೋಶಿಯವರು ಟ್ವೀಟ್ ಮೂಲಕ ವೋಲ್ವೋ ಬಸ್ ಸೇವೆಗೆ ಸರ್ಕಾರಕ್ಕೆ ಮನವಿ ಮಾಡಿದ್ದರು. ಕ್ರಿಕೆಟಿಗ ಸುನಿಲ್ ಮನವಿಗೆ ಸ್ಪಂದಿಸಿದ್ದ ಆಗಿನ ಸಾರಿಗೆ ಸಚಿವ ಬಿ ಶ್ರೀರಾಮುಲು ಅವರು ಬಸ್ ಸೇವೆ ಕಲ್ಪಿಸಿದ್ದರು.

ಆದ್ರೆ ಕೆಲ ತಿಂಗಳ ನಂತರ ಸಾರಿಗೆ ಸೇವೆ ಸ್ಥಗಿತಗೊಂಡಿದೆ. ಹೀಗಾಗಿ ಈಗ ಮತ್ತೆ ಟ್ವೀಟ್ ಮಾಡಿ ಬಸ್ ಸೇವೆ ಪುನರಾರಂಭಗೊಳಿಸಲು ಮನವಿ ಮಾಡಿದ್ದಾರೆ. ಸಿಎಂ ಸಿದ್ದರಾಮಯ್ಯ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲರನ್ನು ಟ್ಯಾಗ್ ಮಾಡಿ ಮನವಿ ಮಾಡಿದ್ದಾರೆ.




ಗದಗ ತಾಲೂಕಿನ ಹಾತಲಗೇರಿ ಗ್ರಾಮದಲ್ಲಿ ಮಹೇಶಕುಮಾರ ಮೆಮೋರಿಯಲ್ ಟ್ರಸ್ಟ್‌ನ ಭೂಮಿಪೂಜಾ ಹಾಗೂ ಅಡಿಗಲ್ಲು ಸಮಾರಂಭವನ್ನು ಯುವ ಮುಖಂಡ ಕೃಷ್ಣಗೌಡ ಹನಮಂತಗೌಡ ಪಾಟೀಲ ನೆರವೇರಿಸಿದರು. ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಚಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಟ್ರಸ್ಟ್ ಅಧ್ಯಕ್ಷ ಸತ್ಯಪ್ಪ ಭರಮಪ್ಪ ಬೇಲೇರಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಹಾತಲಗೇರಿ ಗ್ರಾಮಸ್ಥರು, ಗ್ರಾ.ಪಂ ಸದಸ್ಯರು, ಅಭಿಮಾನಿಗಳು ಹಾಜರಿದ್ದರು.

**ಮೊದಲ ಬಾರಿಗೆ ಪರಿಶಿಷ್ಟ ಜಾತಿಯ ಮಹಿಳೆಗೆ ಒಲಿದ ಶಿರಹಟ್ಟಿ ಪ.ಪಂ ಅಧ್ಯಕ್ಷ ಸ್ಥಾನ**

# ನನಸಾದ ಶತಮಾನದ ಕನಸು

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಇಲ್ಲಿನ ಪಟ್ಟಣ ಪಂಚಾಯಿತಿಯಲ್ಲಿ ಇದೇ ಮೊದಲ ಬಾರಿಗೆ ಪರಿಶಿಷ್ಟ ಜಾತಿಯ ಮಹಿಳೆಯೊಬ್ಬರಿಗೆ ಅಧ್ಯಕ್ಷ ಸ್ಥಾನ ಒಲಿದು ಬಂದಿದ್ದು, ಸಮುದಾಯದಲ್ಲಿ ಸಂತಸ ಮನೆ ಮಾಡಿದೆ. ಅಧಿಕೃತ ಘೋಷಣೆಯಾಗುತ್ತಿದ್ದಂತೆಯೇ ನೂತನ ಅಧ್ಯಕ್ಷ-ಉಪಾಧ್ಯಕ್ಷರ ಭವ್ಯ ಮೆರವಣಿಗೆಯು ಪಟ್ಟಣದ ಪ್ರಮುಖ ಬೀದಿಯಲ್ಲಿ ಅದ್ದೂರಿಯಿಂದ ನಡೆಯಿತು. ಮತ್ತೊಮ್ಮೆ ಶಿರಹಟ್ಟಿ ಪ.ಪಂನಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದ ಗದ್ದುಗೆ ಅಲಂಕರಿಸಿತು.

ಶಿರಹಟ್ಟಿ ಪ.ಪಂ ವ್ಯಾಪ್ತಿಯಲ್ಲಿ ಬರುವ 18 ವಾರ್ಡುಗಳಲ್ಲಿ 11ರಲ್ಲಿ ಕಾಂಗ್ರೆಸ್ ಸದಸ್ಯರಿದ್ದು, ಬಿಜೆಪಿಯ 7 ಜನ ಸದಸ್ಯರಿದ್ದಾರೆ. ಹೀಗಾಗಿ ಕಾಂಗ್ರೆಸ್ ಪಕ್ಷ ಇಲ್ಲಿ ಪೂರ್ಣ ಬಹುಮತ ಹೊಂದಿದ್ದು, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಎರಡೂ ಸ್ಥಾನಗಳಿಗೂ ಸಾಮಾನ್ಯ ಮಹಿಳೆ ಮೀಸಲಾತಿ ಇತ್ತು. ಮಂಗಳವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ವಾ.ನಂ.15ರ ದೇವಕ್ಕ ಗುಡಿಮನಿ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ವಾ.ನಂ.4ರ ನೀಲವ್ವ ಹುಬ್ಬಳ್ಳಿ ಮಾತ್ರ ನಾಮಪತ್ರ ಸಲ್ಲಿಸಿದ್ದರು. ನಾಮಪತ್ರಗಳು ಕ್ರಮಬದ್ಧವಾಗಿದ್ದರಿಂದ ಉಳಿದಂತೆ ಯಾವ ನಾಮಪತ್ರಗಳು ಸಲ್ಲಿಕೆಯಾಗದೇ ಇರುವುದರಿಂದ ಚುನಾವಣಾಧಿಕಾರಿ ಹಾಗೂ ತಹಸೀಲ್ದಾರ, ಅನಿಲ ಬಡಿಗೇರ ಮತ್ತು ಮುಖ್ಯಾಧಿಕಾರಿ ಸಿದ್ದರಾಯ ಕಟ್ಟಿಮನಿ ಮಧ್ಯಾಹ್ನ 2ರ ಸುಮಾರಿಗೆ ಅವಿರೋಧ ಆಯ್ಕೆ ಘೋಷಣೆ ಮಾಡಿದರು.



**ತೆರೆದ ವಾಹನದಲ್ಲಿ ಭವ್ಯ ಮೆರವಣಿಗೆ**

ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಮತ್ತು ಯುವಕರು ತೆರೆದ ವಾಹನದಲ್ಲಿ ಅಧ್ಯಕ್ಷ-ಉಪಾಧ್ಯಕ್ಷರ ಭವ್ಯ ಮೆರವಣಿಗೆಯನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಡೆಸಿದರು. ಈ ಸಂದರ್ಭದಲ್ಲಿ ಪಟಾಕಿ ಸಿಡಿಸಿ, ಬಣ್ಣ ಎರಚಿ ಸಂಭ್ರಮಿಸಲಾಯಿತು.

ಸಮುದಾಯದ ವತಿಯಿಂದ ಮಹಿಳಾ ಸದಸ್ಯರು ಅಧ್ಯಕ್ಷರಾಗಬೇಕೆನ್ನುವ ಸುಮಾರು 50-60ವರ್ಷಗಳ ಕನಸು ಈಗ ನನಸಾಗಿದ್ದು, ಇದರಿಂದ ಸಮುದಾಯಕ್ಕೆ ನ್ಯಾಯ ಸಿಕ್ಕಂತಾಗಿದೆ. ಸಾಮಾನ್ಯ ಮಹಿಳೆ ಮೀಸಲಾತಿಯಲ್ಲಿ ಸಮುದಾಯದ ಸದಸ್ಯೆಯೋರ್ವರು ಅಧ್ಯಕ್ಷ ಸ್ಥಾನ ಅಲಂಕರಿಸುತ್ತಿರುವುದು ಹೆಮ್ಮೆಯ ಸಂಗತಿಯೆನಿಸುತ್ತಿದೆ. ಪಟ್ಟಣದ ಸರ್ವಾಂಗೀಣ ಅಭಿವೃದ್ಧಿಗೆ ನೂತನ ಅಧ್ಯಕ್ಷರು ಶ್ರಮಿಸುವ ವಿಶ್ವಾಸವಿದೆ ಎಂದು ಶಿರಹಟ್ಟಿ ಎಸ್‌ಸಿ ಬ್ಲಾಕ್ ಅಧ್ಯಕ್ಷ ಮುತ್ತುರಾಜ ಭಾವಿಮನಿ ಹೇಳಿದರು.

ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆಯೇ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹುಮಾಯೂನ್ ಮಾಗಡಿ, ಮಾಜಿ ಶಾಸಕರಾದ ರಾಮಕೃಷ್ಣ ದೊಡ್ಡಮನಿ, ರಾಮಣ್ಣ ಲಮಾಣಿ, ಕೆಪಿಸಿಸಿ ಪ್ರ.ಕಾರ್ಯದರ್ಶಿ ಸುಜಾತಾ ದೊಡ್ಡಮನಿ, ಮುಖಂಡ ಗುರುನಾಥ ದಾನಪ್ಪನವರ, ಡಿ.ಕೆ. ಹೊನ್ನಪ್ಪನವರ, ಅಜ್ಜು ಪಾಟೀಲ, ಪರಮೇಶ ಪರಬ, ಹೊನ್ನಪ್ಪ ಶಿರಹಟ್ಟಿ, ಅಶ್ರತಅಲಿ ಢಾಲಾಯತ, ಮಂಜುನಾಥ ಘಂಟಿ, ಮಹಾಂತೇಶ ದಶಮನಿ, ರವಿ ಗುಡಿಮನಿ ಸೇರಿದಂತೆ ಇನ್ನೂ ಅನೇಕ ಮುಂಡರು ಆಗಮಿಸಿ ನೂತನ ಅಧ್ಯಕ್ಷ-ಉಪಾಧ್ಯಕ್ಷರನ್ನು ಸನ್ಮಾನಿಸಿದರು.

**ಗದಗ 26ನೇ ವಾರ್ಡ್‌ನ ವಿವಿಧ ಕಾಮಗಾರಿಗೆ ಭೂಮಿಪೂಜೆ**

# ಬಿಜೆಪಿಯಿಂದ ಅಭಿವೃದ್ಧಿಪರ ಕಾರ್ಯ

■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದಲ್ಲಿ ಈ ಹಿಂದಿನ ಅವಧಿಯಲ್ಲಿ ಬಿಜೆಪಿ ಆಡಳಿತವಿದ್ದಾಗ ಗದಗ-ಬೆಟಗೇರಿ ನಗರಸಭೆಗೆ ಸಾಕಷ್ಟು ಅನುದಾನ ಮಂಜೂರಾಗಿದ್ದು, ಹಲವಾರು ಅಭಿವೃದ್ಧಿಪರ ಕಾರ್ಯಗಳಾಗಿವೆ ಎಂದು ವಿ.ಪ ಸದಸ್ಯ ಎಸ್.ವ್ಹಿ. ಸಂಕನೂರ ಹೇಳಿದರು.

ಅವರು ಮಂಗಳವಾರ ಗದುಗಿನ 26ನೇ ವಾರ್ಡ್‌ನ ಕಮ್ಮಾರ ಸಾಲು ಪ್ರದೇಶದ ಅರಸಿದ್ಧಿ ಅಂಗಡಿಯಿಂದ ಜನತಾ ಬಜಾರವರೆಗೆ ರಸ್ತೆ ನಿರ್ಮಾಣ ಕಾಮಗಾರಿ ಸೇರಿದಂತೆ ವಾರ್ಡ್‌ನ ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ ಆಗಿನ ಜಿಲ್ಲಾ ಉಸ್ತುವಾರಿ ಸಚಿವ ಸಿ.ಸಿ. ಪಾಟೀಲರು ವಿಶೇಷ ಕಾಳಜಿ ವಹಿಸಿ ಗದಗ-ಬೆಟಗೇರಿ ಅವಳಿ ನಗರಕ್ಕೆ ನಗರೋತ್ಥಾನ ಸೇರಿದಂತೆ ಹಲವಾರು ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಬಿಡುಗಡೆ ಮಾಡಿಸಿದ್ದರು. ಕಾರಣಾಂತರದಿಂದ ಯೋಜನೆಗಳು ಅನುಷ್ಠಾನಗೊಂಡಿರಲಿಲ್ಲ. ಇದೀಗ ಈ ವಾರ್ಡ್‌ನ ನಗರಸಭಾ ಸದಸ್ಯೆ ಹುಲಿಗೆಮ್ಮ ಹಬೀಬ ಅವರು ಆಸಕ್ತಿ ವಹಿಸಿ ಈ ಪ್ರದೇಶದ ರಸ್ತೆ, ಚರಂಡಿ ಕೆಲಸ ಆಗುವಂತೆ ಮಾಡಿದ್ದಾರೆ ಎಂದರು.



ಈ ವಾರ್ಡ್‌ನ ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು, ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಯನ್ನು ಕಾಲಮಿತಿಯೊಳಗೆ ಮಾಡಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಬೇಕು. ಯಾವುದೇ ವಿಷಯದಲ್ಲಿ ರಾಜಿ ಬೇಡ ಎಂದರಲ್ಲದೆ, ಈ ಭಾಗದಲ್ಲಿ ಕಾಮಗಾರಿ ನಡೆದಾಗ ಸಾರ್ವಜನಿಕರು, ಗ್ರೇನ್ ಮಾರ್ಕೆಟ್ ವ್ಯಾಪಾರಸ್ಥರು ಗುತ್ತಿಗೆದಾರರಿಗೆ ಸಹಕಾರ ನೀಡಿ ಕಾಮಗಾರಿ ಶೀಘ್ರವಾಗಿ ಮುಗಿಯುವಂತೆ ಸಹಕಾರ ನೀಡಬೇಕು. ಅಗತ್ಯ ಬಿದ್ದರೆ ಅಭಿವೃದ್ಧಿ ಕಾರ್ಯಕ್ಕೆ ಶಾಸಕರ ನಿಧಿಯಿಂದ ಆರ್ಥಿಕ ನೆರವು ನೀಡುವ ಭರವಸೆ ನೀಡಿದರು.

ರಾಜು ಕುರಡಗಿ, ಜಗನ್ನಾಥಸಾ ಭಾಂಡಗೆ ಮಾತನಾಡಿದರು. ರಾಘವೇಂದ್ರ ಹಬೀಬ ಸ್ವಾಗತಿಸಿದರು. ರಮೇಶ ಸಜ್ಜಗಾರ ನಿರೂಪಿಸಿದರು. ಭೀಮಸಿಂಗ್ ರಾಠೋಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಬಸವರಾಜ ಕುರಗೋಡ, ವಿಜಯ ಸೋಳಂಕಿ, ಸಿದ್ದು ಪವಾರ, ಕೀರ್ತಿ ಕಾಂಬಳೇಕರ, ವಿಜಯ ಬನಹಟ್ಟಿ, ಗೋಪಾಲ ಪವಾರ, ಸುರೇಶ ಚವ್ಹಾಣ, ಬಡಿಗಣ್ಣವರ, ಅರಸಿದ್ಧಿ, ಭೂಸ್ತ ಮುಂತಾದವರು ಪಾಲ್ಗೊಂಡಿದ್ದರು.

26ನೇ ವಾರ್ಡ್‌ನ ನಗರಸಭಾ ಸದಸ್ಯೆ ಹುಲಿಗೆಮ್ಮ ಹಬೀಬ ಮಾತನಾಡಿ, ವಾರ್ಡ್‌ನಲ್ಲಿ ವಿವಿಧೆಡೆ ರಸ್ತೆ, ಚರಂಡಿ ನಿರ್ಮಾಣಕ್ಕಾಗಿ ನಗರೋತ್ಥಾನ 4ನೇ ಹಂತದಿಂದ 48 ಲಕ್ಷ ರೂ, ಜನರಲ್ ಫಂಡ್‌ನಿಂದ 28 ಲಕ್ಷ ರೂ, 15ನೇ ಹಣಕಾಸು ಅನುದಾನದಿಂದ 7 ಲಕ್ಷ ರೂ ಹಾಗೂ ಎಸ್.ಎಫ್.ಸಿ ಅನುದಾನದಿಂದ 9 ಲಕ್ಷ ರೂ.ಗಳ ಕಾಮಗಾರಿಗಳನ್ನು ಹಂತಹಂತವಾಗಿ ಮಾಡಲಾಗುತ್ತಿದ್ದು, ಅಭಿವೃದ್ಧಿ ಕಾರ್ಯಕ್ಕೆ ವಾರ್ಡ್‌ನ ಜನರು ಸಹಕಾರ ನೀಡಬೇಕೆಂದರು.

## ದೇವರಾಜ ಅರಸು ದೂರದೃಷ್ಟಿಯ ನೇತಾರ



■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಹಿಂದುಳಿದ ವರ್ಗಗಳ ನೇತಾರ, ಮೌನ ಕ್ರಾಂತಿಯ ಹರಿಕಾರ, ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸು ಅವರು ಮುಂದಿನ ಪೀಳಿಗೆಯ ಬದುಕಿನ ದೂರದೃಷ್ಟಿಯಿಂದ ಅಂದಿನ ಕಾಲದಲ್ಲೇ ಕ್ರಾಂತಿಕಾರಿ ಹೆಜ್ಜೆಯನ್ನಿಟ್ಟಿದ್ದರು ಎಂದು ಶಿರಹಟ್ಟಿ ತಾಲೂಕಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಮರಿಗೌಡ ಸುರಕೋಡ ಹೇಳಿದರು.

ಅವರು ಮಂಗಳವಾರ ಶಿರಹಟ್ಟಿಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಡಿ.ದೇವರಾಜ ಅರಸು ಭವನದಲ್ಲಿ ಅರಸು ಅವರ 109ನೇ ಜನ್ಮದಿನಾಚರಣೆ ಸಂದರ್ಭದಲ್ಲಿ ಮಾತನಾಡಿದರು.

ಗೇಣಿ ಶಾಸನ, ಹಾವನೂರು ಆಯೋಗದಂತಹ ಪ್ರಮುಖ ನಿರ್ಧಾರಗಳನ್ನು ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ತೆಗೆದುಕೊಂಡ ಹಿನ್ನೆಲೆಯಲ್ಲಿ ಅದರ ಪ್ರತಿಫಲ ಇಂದಿನ ಪೀಳಿಗೆಗೆ ಆಗುತ್ತಿದೆ. ಗೇಣಿ ಹೋರಾಟದ ಅನುಷ್ಠಾನ ಆಗಿದ್ದರೆ, ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಹಾವನೂರ ಆಯೋಗ ರಚಿಸದಿದ್ದರೆ ಈವರೆಗೂ ಬಹುಸಂಖ್ಯಾತರಿಗೆ ನ್ಯಾಯ ಸಿಗುತ್ತಿರಲಿಲ್ಲ. ಆದರೆ ದೇವರಾಜ ಅರಸು ಅವರು ತಮ್ಮ ನಿರ್ಧಾರದಿಂದ ಮುಂದಿನ ಪೀಳಿಗೆಯ ಬದುಕನ್ನು ರೂಪಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸಿದ್ದರು. ಇಂತಹ ಮಹನೀಯರ ಆದರ್ಶ ಸರ್ವಕಾಲಕ್ಕೂ ಮಾದರಿ ಎಂದರು.

ಇದೇ ಸಂದರ್ಭದಲ್ಲಿ 2023-24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಪ್ರಥಮ ಸ್ಥಾನ ಪಡೆದ ನಿಲಯದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಎಂ.ಕೆ. ಹಿರೇಮಠ, ಕೆ.ಎ. ಬಳಿಗೇರ ಸೇರಿದಂತೆ ನಿಲಯ ಮೇಲ್ವಿಚಾರಕರು, ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಶರಣರ ವಚನಗಳು ಜೀವನದ ದಾರಿದೀಪ

■ವಿಜಯಸಾಕ್ಷಿ ಸುದ್ದಿ, ನರೇಗಲ್

ವಚನಗಳ ಮೂಲವನ್ನು ಅರಿತುಕೊಂಡು ಜೀವನ ಸಾಗಿಸಬೇಕು. ನಮ್ಮ ಒಳಗಣ್ಣು ಸದಾ ಜಾಗೃತವಾಗಿರಬೇಕು. ಪ್ರಾಮಾಣಿಕ ಕಾಯಕವೇ ನಮ್ಮ ಉಸಿರಾಗಬೇಕು. ಶರಣರ ವಚನಗಳು ಬಾಳಿಗೆ ದಾರಿ ದೀಪವಾಗಿದೆ. ಅವುಗಳನ್ನು ಅಥೈಸಿಕೊಂಡು ಜೀವನದಲ್ಲಿ ಅಳವಡಿಸಿಕೊಂಡರೆ ಯಶಸ್ಸು ಸಾಧ್ಯ ಎಂದು ಕೊಪ್ಪಳದ ಗವಿಸಿದ್ಧೇಶ್ವರ ಮಠದ ಗವಿಸಿದ್ಧೇಶ್ವರ ಸ್ವಾಮೀಜಿ ಹೇಳಿದರು.

ಪಟ್ಟಣದ ಜಕ್ಕಲಿ ರಸ್ತೆಯ ಹೆಸ್ಕಾಂ ಕಚೇರಿ ಆವರಣದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಪಂಚ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.



ನಮ್ಮಲ್ಲಿನ ಕೀಳಿರಿಮೆ, ಸಣ್ಣ ವಿಚಾರಗಳನ್ನು ಕಿತ್ತು ಹಾಕಬೇಕು. ಮೌಢ್ಯಗಳು ನಮ್ಮನ್ನು ಹೈರಾಣ ಮಾಡುತ್ತಲಿವೆ. 12ನೇ ಶತಮಾನದಲ್ಲಿಯೇ ಬಸವಣ್ಣನವರು ವಚನಗಳ ಮೂಲಕ ಸಾಮಾಜಿಕ ಬದಲಾವಣೆಗೆ ನಾಂದಿ ಹಾಡಿದರು. ವಚನಗಳು ಸರ್ವ ಕಾಲಕ್ಕೂ ಪ್ರಸ್ತುತವಾಗಿವೆ. ಊರಿನಲ್ಲಿನ ಎಲ್ಲ ಜನರೂ ಸಾಮರಸ್ಯದಿಂದ ಬದುಕು ಸಾಗಿಸುವುದು ಬಹಳಷ್ಟು ಮುಖ್ಯ. ಯಾವುದೇ ಜಾತಿ, ಸಂಪತ್ತು ನಮ್ಮೊಂದಿಗೆ ಬರುವುದಿಲ್ಲ ಎಂದು ನುಡಿದರು.

ರೋಣ ಪುರಸಭೆ ಉಪಾಧ್ಯಕ್ಷ ಮಿಥುನ ಪಾಟೀಲ, ಅಕ್ಷಯ ಪಾಟೀಲ ಮಾತನಾಡಿದರು. ಹನಮಂತ ಅಬ್ಬಿಗೇರಿ, ಮೂಕಪ್ಪ ನವಲಗುಂದ, ಜಗದೀಶ ಬಂಡಿವಡ್ಡರ, ಸಂತೋಷ ಹನಮಸಾಗರ, ಶೇಖಪ್ಪ ಜುಟ್ಲ, ದಾವುದಅಲಿ ಕುದರಿ, ಮೈಲಾರಪ್ಪ ಚಳ್ಳಮರದ, ಸಂತೋಷ ಹನಮಸಾಗರ, ಖದರಬಾಷಾ ಹೂಲಗೇರಿ, ಯಲ್ಲಪ್ಪ ಅಬ್ಬಿಗೇರಿ, ಲೋಕೇಶ ಮಣ್ಣೊಡ್ಡರ, ರಾಜು ಮಣ್ಣೊಡ್ಡರ, ಶಿವಾನಂದ ಗೋಗೇರಿ, ವೀರೇಶ ಮಣ್ಣೊಡ್ಡರ, ಹೆಸ್ಕಾಂ ಸಿಬ್ಬಂದಿಗಳಿದ್ದರು.

ಮಕ್ಕಳ ಕವಿತೆ

## ಜೋಡು ಗಿಳಿಗಳು



ಜೋಡು ಗಿಳಿಗಳು
ಕೂಡಿ ಹಾರುತ
ನಾಡ ಸುತ್ತಲು ಹೊರಟವು /
ನಾಡ ನುಡಿಯನು
ಹಾಡಿ ಕುಣಿಯುತ
ಜೋಡು ಗಿಳಿಗಳು ನಲಿದವು /

ಗಿಳಿಯ ಜೋಡಿಯು
ಬಳಿಗೆ ಬಂದವು
ಸೆಳೆದು ಮನವನು ಕುಕ್ಕುತ /
ಇಳೆಯ ಹಸಿರಿಗೆ
ಕಳೆಯ ತುಂಬುತ
ಹೊಳೆದು ಬೆಳೆಯುತ ಕುಕ್ಕುತ /

ಬಾಗಿ ನೋಡಲು
ಜೋಗ ಸಿರಿಯು
ಕೂಗಿ ಕರೆದಿದೆ ಗಿಳಿಗಳ /
ಬೀಗಿ ಮನದಲಿ
ತೂಗಿ ಹರುಷದಿ
ಸಾಗಿ ಬಂದವು ಜೋಗಕೆ/

ದಿನವು ಕುಣಿಯುತ
ಮನದಿ ನಲಿದವು
ಜನರ ತೊರೆದೂ ಗೂಡಲಿ /
ಗುಣದಿ ಮೆರೆಯುತ
ದಿನವು ಬೆಳಗುತ
ಮನದಿ ದಿನದಿನ ತನನನ /

ಕಾಡು ಗಳ್ಳರು
ಕಾಡು ಕಡಿಯಲು
ಬೀಡು ಬಿಟ್ಟರು ಕಾಡಲಿ /
ಜೋಡು ಗಿಳಿಗಳು
ಗೂಡು ತೊರೆದವು
ಕೇಡು ಗಳ್ಳರ ಶಪಿಸುತ

ಸುತ್ತ ಮುತ್ತಲು
ಕತ್ತು ತಿರುವುತ
ತುತ್ತು ಹುಡುಕಲು ಹೊರಟಿವೆ /
ಹೊತ್ತು ಕನಸನು
ಬಿತ್ತಿ ಮನದಲಿ
ಮತ್ತೆ ನೆಲೆಯನು ಹುಡುಕುತ /

ಕಾಡು ಕಡಿದರೆ
ನಾಡು ಹಾನಿಯು
ಕೇಡು ಬೇಡವೂ ಕೇಳಿರಿ /
ಕಾಡೊ ಮನಗಳ
ಕಾಡ ಗಳ್ಳರ
ತೋಡಿ ಗುಂಡಿಗೆ ಹಾಕಿರಿ /

ಗೀತಾ ಎಂ ಸೋಂಪುರ (koppal)

## ನಾಳೆ ವಿದ್ಯುತ್ ವ್ಯತ್ಯಯ

■ವಿಜಯಸಾಕ್ಷಿ ಸುದ್ದಿ, ಗದಗ

110 ಕೆವ್ಹಿ ಬೆಟಗೇರಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕೆಲಸ ಕೈಗೊಳ್ಳುವುದರಿಂದ ಆಗಸ್ಟ್ 22ರ ಮುಂಜಾನೆ 10 ಗಂಟೆಯಿಂದ ಸಾಯಂಕಾಲ 5.30 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತದೆ.

110 ಕೆವ್ಹಿ ಬೆಟಗೇರಿ ಉಪಕೇಂದ್ರದಿಂದ ಪೂರೈಕೆಯಾಗುವ ಎಲ್ಲಾ ನಗರ, ಕೈಗಾರಿಕಾ, ನಿರಂತರ ಜ್ಯೋತಿ, ಇ.ಐ.ಪಿ, ಸೋಲಾರ ಐ.ಪಿ.ಪಿ ಮತ್ತು ಗ್ರಾಮೀಣ ಪ್ರದೇಶಗಳ ಎಲ್ಲಾ 11 ಕೆವ್ಹಿ ವಿತರಣಾ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಕಾರಣ ಸಾರ್ವಜನಿಕರು ಸದರಿ ಪ್ರಕಟಣೆ ಗಮನಿಸಿ ಕಂಪನಿಯೊಂದಿಗೆ ಸಹಕರಿಸಬೇಕೆಂದು ಹೆಸ್ಕಾಂ ಪ್ರಕಟಣೆ ತಿಳಿಸಿದೆ.

## ಭರ್ತಿಯಾದ ಆಲಮಟ್ಟಿ ಜಲಾಶಯ: ಇಂದು ಸಿಎಂ ಸಿದ್ದರಾಮಯ್ಯರಿಂದ ಬಾಗಿನ!



■ವಿಜಯಸಾಕ್ಷಿ ಸುದ್ದಿ, ವಿಜಯಪುರ

ಭರ್ತಿಯಾದ ಆಲಮಟ್ಟಿ ಜಲಾಶಯಕ್ಕೆ ಇಂದು ಸಿಎಂ ಸಿದ್ದರಾಮಯ್ಯ ಅವರು ಬಾಗಿನ ಅರ್ಪಿಸಲಿದ್ದಾರೆ.

ಆಲಮಟ್ಟಿ ಜಲಾಶಯ ಉತ್ತರ ಕರ್ನಾಟಕದ ಜೀವನಾಡಿಯಾಗಿದ್ದು, ಭಾರೀ ಮಳೆಯಿಂದ ಭರ್ತಿಯಾಗಿದೆ.

ಭರ್ತಿಯಾಗಿರುವ ಆಲಮಟ್ಟಿ ಜಲಾಶಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಾಗಿನ ಅರ್ಪಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಬೆಳಗ್ಗೆ 10 ಗಂಟೆಗೆ ಹೆಚ್‌ಎಎಲ್ ನಿಂದ ವಿಮಾನದಲ್ಲಿ ಹೊರಟು 10:50ಕ್ಕೆ ಕೊಪ್ಪಳದ ಗಿಣಿಗೇರಾ ಏರ್ ಸ್ಟ್ರಿಪ್ ತಲುಪಲಿದ್ದಾರೆ. ನಂತರ ಗಿಣಿಗೇರಾದಿಂದ ರಸ್ತೆ ಮಾರ್ಗವಾಗಿ ವಿಜಯಪುರ ಜಿಲ್ಲೆಯ ಆಲಮಟ್ಟಿಗೆ ಮಧ್ಯಾಹ್ನ 12.30ಕ್ಕೆ ತಲುಪಲಿದ್ದಾರೆ. ಅಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಆಲಮಟ್ಟಿ ಜಲಾಯಶದ ಬಳಿ ಮೊದಲಿಗೆ ಕೃಷ್ಣಾ ನದಿಗೆ ಪೂಜೆ ಸಲ್ಲಿಸಲಿದ್ದಾರೆ. ನಂತರ ಬಾಗಿನ ಅರ್ಪಿಸಲಿದ್ದಾರೆ. ಬಳಿಕ ಮದ್ಯಾಹ್ನ 3 ಗಂಟೆಗೆ ರಸ್ತೆ ಮಾರ್ಗವಾಗಿ ಮತ್ತೆ ಗಿಣಿಗೇರಾಕ್ಕೆ ತೆರಳಿ, ಅಲ್ಲಿಂದ ವಿಮಾನದ ಮೂಲಕ ಬೆಂಗಳೂರಿಗೆ ವಾಪಸ್ ಆಗಲಿದ್ದಾರೆ.

ಈ ಜಲಾಶಯ 9 ಜಿಲ್ಲೆಗಳಿಗೆ ನೀರು ಒದಗಿಸುತ್ತದೆ. ಈ ಜಲಾಶಯದಲ್ಲಿ ವಿದ್ಯುತ್ ಉತ್ಪಾದನೆ ಮಾಡಲಾಗುತ್ತದೆ. ಇದೀಗ ಜಲಾಶಯ ಸಂಪೂರ್ಣ ಭರ್ತಿಯಾಗಿರುವುದು ಖುಷಿಯ ವಿಚಾರ.

ತಿರುಪತಿ ತಿರುಮಲ ದೇವಸ್ಥಾನದ ಪ್ರವಾಸ ಕಥನ

# ಒಂದು ಯಾತ್ರೆಯ ನೆನಪು...



ದೇಶ ಸುತ್ತಿ ನೋಡು, ಕೋಶ ಓದಿ ನೋಡು. ಇದು ಹಳೆಯ ಗಾದೆ. ಜೀವನದಲ್ಲಿ ಅನುಭವ ಮುಖ್ಯ. ಒಂದೊಂದು ಅನುಭವ ಒಂದೊಂದು ಪಾಠವನ್ನು ಕಲಿಸುತ್ತದೆ. ದೇಶವನ್ನು ಸುತ್ತಿ ನೋಡಿದಷ್ಟು ಅನುಭವವಾಗುತ್ತದೆ. ಸಂಸ್ಕೃತಿ, ಧಾರ್ಮಿಕತೆ ಆಚಾರ ವಿಚಾರ, ಭಾಷೆ, ಅಭಿರುಚಿ ಬಗ್ಗೆ ಅನುಭವವಾಗುತ್ತದೆ.

ನನಗೊಂದು ಮಹಾದಾಸೆ ಇತ್ತು. ತಿರುಪತಿಯ ತಿರುಮಲ ಬೆಟ್ಟಕ್ಕೆ ಹೋಗಿ ಬರಬೇಕು ಎಂಬುದೇ ಆ ಆಸೆ. ಕೊನೆಗೆ ನಾನು, ನನ್ನ ಸ್ನೇಹಿತ ಶಿಕ್ಷಕವರ್ಗ, ಏನಾದರೂ ಆಗಲಿ ಈ ಜೂನ್ ತಿಂಗಳಲ್ಲಿ ತಿರುಪತಿ ತಿರುಮಲ ಪ್ರವಾಸಕ್ಕೆ ಹೋಗಲೇಬೇಕು ಎಂದುಕೊಂಡು ಸಿದ್ಧರಾಗಿ ಹೊರಟೆವು.

ನಾವು ಶನಿವಾರ ರಾತ್ರಿ ಗದಗ ರೈಲ್ವೆ ನಿಲ್ದಾಣದಿಂದ ತಿರುಪತಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಹೊರಟೆವು. ಪಯಣದ ಉದ್ದಕ್ಕೂ ಹಿಂದಿನ ಎಲ್ಲಾ ಅನುಭವಗಳ ಹರಟೆ, ಶೈಕ್ಷಣಿಕ ಯೋಜನೆಗಳ ಕುರಿತು ಮಾತನಾಡುತ್ತಾ ಸಾಗಿದೆವು. ತಿರುಮಲ ಆಂಧ್ರಪ್ರದೇಶದ ತಿರುಪತಿ ಜಿಲ್ಲೆಯಲ್ಲಿರುವ ವಿಶ್ವವಿಖ್ಯಾತ ಆಧ್ಯಾತ್ಮಿಕ ಪಟ್ಟಣ. ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನ (ಬಾಲಾಜಿ ದೇವಸ್ಥಾನ), ವೆಂಕಟೇಶ್ವರ ಅಥವಾ ಬಾಲಾಜಿಯ ವಾಸಸ್ಥಾನ ಇಲ್ಲಿದೆ. ಸಮುದ್ರ ಮಟ್ಟದಿಂದ 3,200 ಅಡಿ ಎತ್ತರದಲ್ಲಿರುವ ತಿರುಮಲವು ಶೇಷಾಚಲಂ ಬೆಟ್ಟಗಳ ಏಳು ಶಿಖರಗಳಾದ ಶೇಷಾದ್ರಿ, ನೀಲಾದ್ರಿ, ಗರುಡಾದ್ರಿ, ಅಂಜನಾದ್ರಿ, ವೃಷಬಾದ್ರಿ, ನಾರಾಯಣಾದ್ರಿ ಮತ್ತು ವೆಂಕಟಾದ್ರಿಯಿಂದ ಆವೃತವಾಗಿದೆ.

ತಮ್ಮ ಹರಕೆಯನ್ನು ಪೂರೈಸಲು ಭಕ್ತರು ಕಾಲ್ನಡಿಗೆಯಲ್ಲಿ ತಿರುಮಲ ತಲುಪುತ್ತಾರೆ. ನಾವು ಅಲಿಪಿರಿಯಲ್ಲಿರುವ ಸಣ್ಣ ದೇವಾಲಯದಲ್ಲಿ ವೆಂಕಟೇಶ್ವರನ ಆಶೀರ್ವಾದವನ್ನು ಪಡೆಯುವ ಮೂಲಕ ಸುಮಾರು 3550 ಮೆಟ್ಟಿಲುಗಳನ್ನು ಹತ್ತಿಕೊಂಡು ಪಾದಯಾತ್ರೆಯ ಚಾರಣ (ಕಾಲ್ನಡಿಗೆ)ಮಾಡುವ ಮೂಲಕ ಪಯಣ ಬೆಳೆಸಿದೆವು. ನೂರು ಮೆಟ್ಟಿಲು ಏರುವ ತನಕ ಆಯಾಸ ಕಡಿಮೆ. ಆದರೆ ನಂತರ 1500ರವರೆಗಿನ ಮೆಟ್ಟಿಲುಗಳು ತುಂಬಾ ಪ್ರಯಾಸದಾಯಕ.

ಮೊಕ್ಕಲ್ಲ ಪರ್ವತಂ ಈ ಚಾರಣದ ಕೊನೆಯ ಮೆಟ್ಟಿಲು. ಅನೇಕ ಭಕ್ತರು ಭಗವಂತನಿಗೆ ಮಾಡಿದ ಹರಕೆಯಂತೆ ಈ ಮೊಕ್ಕಲ ಪರ್ವತವನ್ನು ತಮ್ಮ ಮೊಣಕಾಲುಗಳ ಮೇಲೆ ಏರುತ್ತಾರೆ. ಈಗ ಸಂಪೂರ್ಣ ಮೆಟ್ಟಿಲು ದಾರಿಯನ್ನು ಬಿಸಿಲು ಮತ್ತು ಮಳೆಯಿಂದ ಯಾತ್ರಾರ್ಥಿಗಳನ್ನು ರಕ್ಷಿಸಲು ಮೇಲ್ಛಾವಣಿಯಿಂದ ಮುಚ್ಚಲಾಗಿದೆ. ಕಾಲ್ನಡಿಗೆಯಲ್ಲಿ ಬಂದ ಭಕ್ತರಿಗೆ ವಿಶೇಷ ಸೌಲಭ್ಯ ಕಲ್ಪಿಸಲಾಗಿದೆ.

ವಾರಾಂತ್ಯ ಆಗಿರುವುದರಿಂದ ಅಂದು ಬಹಳ ಭಕ್ತರು ಪಾಲ್ಗೊಂಡಿದ್ದರು. ಹೀಗೆ ಸಾಗಿದ ನಂತರ ಬೆಳಿಗ್ಗೆ 7 ಗಂಟೆ ಆಯಿತು. ಸ್ವಲ್ಪ ವಿಶ್ರಾಂತಿ ಮಾಡಿದ ನಂತರ ಸುಮಾರು 36 ಗಂಟೆಗಳ ನಂತರ ವೈಕುಂಠನ ದರ್ಶನವಾಯಿತು. ದರ್ಶನ ಪಡೆದುಕೊಂಡ ನಂತರ ತಿಮ್ಮಪ್ಪನ ಲಾಡು ಪ್ರಸಾದ ಪಡೆದು ಅಲ್ಲಿಂದ ಹೊರಟು ಜಾತ್ರೆಯ ಅಂಗಡಿಗಳ ಕಡೆಗೆ ಹೆಜ್ಜೆ ಹಾಕಿದೆವು. ನಮಗೆ ಬೇಕಾದ ಸಾಮಗ್ರಿಗಳನ್ನು ತೆಗೆದುಕೊಂಡು ತಿರುಮಲ ಬಸ್ ನಿಲ್ದಾಣದಿಂದ ತಿರುಪತಿ ನಗರಕ್ಕೆ ಬಂದೆವು.

ನಂತರ ನಾವು ಮರಳಿ ತಿರುಪತಿಗೆ ಬಂದು ರೈಲಿನಲ್ಲಿ ಗದಗ ಕಡೆಗೆ ಪ್ರಯಾಣ ಬೆಳೆಸಿ, ಬೆಳಿಗ್ಗೆ 7 ಗಂಟೆಗೆ ಗದಗ ತಲುಪಿದೆವು. ಒಟ್ಟಾರೆಯಾಗಿ ಪ್ರವಾಸವು ಭಕ್ತಿ, ಭಕ್ತರ ಉತ್ಸಾಹ, ಹುಮ್ಮಸ್ಸನ್ನು ಇಮ್ಮಡಿಗೊಳಿಸುವ ಮಾರ್ಗ. ಆಯಾ ಸ್ಥಳಗಳ ಸಂಸ್ಕೃತಿ-ಸಂಪ್ರದಾಯಗಳನ್ನು ಹತ್ತಿರದಿಂದ ತಿಳಿದುಕೊಳ್ಳಲು ಅನುಕೂಲ ಮಾಡಿಕೊಡುತ್ತದೆ. ಇಂತಹ ಯಾತ್ರೆಗಳು ನಮ್ಮಲ್ಲಿ ಧಾರ್ಮಿಕ ಹಾಗೂ ಜ್ಞಾನದ ದೀವಿಗೆಯನ್ನು ಉದ್ದೀಪನಗೊಳಿಸುವ ಶಕ್ತಿಯನ್ನು ತನ್ನಲ್ಲಿ ಹುದುಗಿಸಿಕೊಂಡಿದೆ. ಆರೋಗ್ಯದಲ್ಲೂ ಚೇತರಿಕೆ ತಂದುಕೊಟ್ಟು ಒತ್ತಡ ಕಡಿಮೆ ಮಾಡುವ ಸುಂದರ ಚಟುವಟಿಕೆಯೂ ಹೌದೆನ್ನಬಹುದು.

– ಬಸವರಾಜ
ಎಮ್.ಯರಗುಪ್ಪಿ.
ಬಿಆರ್‌ಪಿ–ಶಿರಹಟ್ಟಿ,
ಲಕ್ಷ್ಮೇಶ್ವರ.



## ಜಯ ಕರ್ನಾಟಕ ಜನಪರ ವೇದಿಕೆಯ ಗ್ರಾಮ ಘಟಕ ಉದ್ಘಾಟನೆ

■ವಿಜಯಸಾಕ್ಷಿ ಸುದ್ದಿ, ಗದಗ

ಜಯ ಕರ್ನಾಟಕ ಜನಪರ ವೇದಿಕೆಯ ಯುವ ಸಂಸ್ಥಾಪಕ ಅಧ್ಯಕ್ಷ ಬಿ.ಗುಣರಂಜನ್ ಶೆಟ್ಟಿ, ರಾಜ್ಯಾಧ್ಯಕ್ಷ ಜೆ. ಶ್ರೀನಿವಾಸ್ ನೇತೃತ್ವದಲ್ಲಿ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಹಾಲ್ಲಪ್ಪ ವರವಿ ಹಾಗೂ ಕಾರವಾರ ಜಿಲ್ಲಾ ಅಧ್ಯಕ್ಷ ದೀಲಿಪ್ ಕೆ.ಅರ್ಗೆಕರ್ ಅವರ ಆದೇಶದ ಮೇರೆಗೆ ಯಲ್ಲಾಪುರ ತಾಲೂಕಾಧ್ಯಕ್ಷ ರಾಘು ನಾಯ್ಕ ಅವರ ಅಧ್ಯಕ್ಷತೆಯಲ್ಲಿ ಮಾವಿನಕಟ್ಟಾ (ಭರತನಹಳ್ಳಿ ಗ್ರಾಮ) ಗ್ರಾಮ ಘಟಕವನ್ನು ಉದ್ಘಾಟಿಸಲಾಯಿತು.



ತಾಲೂಕು ಸಮಿತಿಗೆ ಸತೀಶ್ ಕೆ.ಗೌಡ್ರ, ಗ್ರಾಮ ಘಟಕದ ಗೌರವ ಅಧ್ಯಕ್ಷರನ್ನಾಗಿ ಅರುಣ್ ಕುಮಾರ್ ಗೌಡ್ರ, ಅಧ್ಯಕ್ಷರಾಗಿ ಕಾರ್ತಿಕ್ ಕೆ.ನಾಯ್ಕ, ಅಶೋಕ ಗೌಡರ, ಬಸವರಾಜ್ ಹಿರೇಮಠ್, ಫಕೀರ್ ಬೋವಿವಡ್ಡರ್, ಈರಪ್ಪ ಬೋವಿವಡ್ಡರ, ಮಹಾದೇವ ಹೆಗಡೆ, ಪ್ರಕಾಶ್ ಜೋಗಿ, ಚೇತನ್ ವಡ್ಡರ, ಸಂದೀಪ್ ಬೋವಿವವಡ್ಡರ, ಚೇತನ ವಡ್ಡರ, ಹನುಮಂತ ಜೋಗಿ, ರಾಮು ಬೋವಿವಡ್ಡರ, ಅನಂತ್ ಸಿದ್ದಿ, ಕಿರಣ ಡೌರಿ, ನಾಗರಾಜ್ ಪಟಗಾರ, ಗಜು ನಾಯ್ಕ, ವಿಶ್ವನಾಥ ನಾಯ್ಕ, ವರದರಾಜ ಹೆರೂರ; ಸಂಜು ವಡ್ಡರ, ರೊಹೀತ್ ನಾಯ್ಕ, ಲೊಕೇಶ ವಡ್ಡರ, ಕಮಲಾಕರ ನಾಯ್ಕ, ಹನುಮಂತ ಮಾದರ, ನಾರಾಯಣ ಡೌರಿ, ಸತೀಶ್ ಮಾರಾಠಿ, ಮೋಹನ ಶೆಟ್ಟಿ ಇವರನ್ನು ಆಯ್ಕೆ ಮಾಡಲಾಯಿತು.

## ಮಹಾರಾಷ್ಟ್ರದ ನಾಗಪೂರ ದೀಕ್ಷಾಭೂಮಿಗೆ ಉಚಿತ ಪ್ರವಾಸ

■ವಿಜಯಸಾಕ್ಷಿ ಸುದ್ದಿ, ಗದಗ

ಸಂವಿಧಾನ ಶಿಲ್ಪಿ ಡಾ. ಬಿ. ಆರ್ ಅಂಬೇಡ್ಕರ್ ಅವರು ಬೌದ್ಧ ಧರ್ಮದ ದೀಕ್ಷೆ ಪಡೆದ ಮಹಾರಾಷ್ಟ್ರದ ನಾಗಪೂರ ದೀಕ್ಷಾಭೂಮಿಗೆ ಈ ಬಾರಿಯೂ ಅರ್ಜಿಯನ್ನು ಆಹ್ವಾನಿಸಲಾಗಿದೆ. ರಾಜ್ಯದಿಂದ ಬಾಬಾಸಾಹೇಬರ ಅನುಯಾಯಿಗಳನ್ನು ಕಳುಹಿಸಲು ರಾಜ್ಯ ಸರ್ಕಾರ ಆರಂಭಸಿರುವ ದೀಕ್ಷಾ ಭೂಮಿ ಯಾತ್ರೆಗೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಹಿಂದಿನ ವರ್ಷ ಗದಗ ಜಿಲ್ಲೆಯಿಂದ 160 ಜನ ಯಾತ್ರೆ ಮಾಡಿದ್ದರು. ಮುಜರಾಯಿ ಇಲಾಖೆಯಿಂದ ಧಾರ್ಮಿಕ ಕ್ಷೇತ್ರಗಳಿಗೆ ಯಾತ್ರೆಯನ್ನು ಕಳುಹಿಸುವ ಮಾದರಿಯಲ್ಲಿ ಪ್ರತಿ ವಿಜಯ ದಶಮಿಯಂದು ನಾಗಪೂರದ ದೀಕ್ಷಾ ಭೂಮಿಯಲ್ಲಿ ನಡೆಯುವ ಧಮ್ಮ ಪರಿವರ್ತನ ದಿನ ಕಾರ್ಯಕ್ರಮಕ್ಕೆ ರಾಜ್ಯದ ಎಲ್ಲ ಜಿಲ್ಲೆಗಳಿಂದ ಅಂಬೇಡ್ಕರ್ ಅನುಯಾಯಿಗಳನ್ನು ಕಳುಹಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಯೋಜನೆ ಆರಂಭಿಸಿತ್ತು. ಈ ಯಾತ್ರೆಗೆ ಸಮಾಜ ಕಲ್ಯಾಣ ಇಲಾಖೆ ಅನುದಾನ ಒದಗಿಸಿ ಪ್ರತಿ ವರ್ಷ ಸಾವಿರಾರು ಅಂಬೇಡ್ಕರ್ ಅನುಯಾಯಿಗಳನ್ನು ದೀಕ್ಷಾಭೂಮಿಗೆ ಕಳುಹಿಸಿ ಬಾಬಾಸಾಹೇಬರ ವಿಚಾರ ಧಾರೆಗಳ ಬಗ್ಗೆ ಅರಿವು ಮೂಡಿಸುತ್ತಿದೆ.

ಕಳೆದ ವರ್ಷ ಗದಗ ಜಿಲ್ಲೆಯಿಂದ 160 ಅನುಯಾಯಿಗಳು ನಾಗಪೂರಕ್ಕೆ ತೆರಳಿದ್ದರು. ಅದೇ ರೀತಿ ಈ ಬಾರಿಯು ಅಕ್ಟೋಬರ್ 12 ರಂದು ನಿಗದಿಯಾಗಿರುವ ಧಮ್ಮ ಪರಿವರ್ತನ ದಿನಕ್ಕೆ ರಾಜ್ಯದಿಂದ ಕಳುಹಿಸಲು ಡಾ. ಬಿ,ಆರ್ ಅಂಬೇಡ್ಕರ ಅನುಯಾಯಿಗಳನ್ನು ಆಯ್ಕೆ ಮಾಡಲು ಆಗಸ್ಟ್ 31 ರವರೆಗೆ ಆನ್ ಲೈನ್‌ನಲ್ಲಿ https://swdservices.karnataka.gov.in ಅರ್ಜಿ ಸಲ್ಲಿಸಿ ಆನ್‌ಲೈನ್ ಅರ್ಜಿಯೊಂದಿಗೆ ಅರ್ಜಿದಾರರ ಆಧಾರ್ ಕಾರ್ಡ್, ಪ್ರಸ್ತುತ ವಿಳಾಸ ಮತ್ತು ದೂರವಾಣಿ, ಫೋಟೋದೊಂದಿಗೆ ಸಂಬಂಧಿಸಿದ ಆಯಾ ತಾಲೂಕಾ ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಲು ಕೋರಲಾಗಿದೆ.

ಇಲಾಖೆಯು ಸದರಿ ಯಾತ್ರಿಗಳಿಗೆ ಬಸ್ ವ್ಯವಸ್ಥೆಯನ್ನು ಮಾತ್ರ ಮಾಡುವುದು. ಊಟ ಮತ್ತು ವಸತಿ ವ್ಯವಸ್ಥೆಯನ್ನು ಸ್ವಂತ ಖರ್ಚಿನಲ್ಲಿ ಮಾಡಿಕೊಳ್ಳಬೇಕು. ಈ ಯಾತ್ರೆಯು ಕೇವಲ ಎಸ್‌ಸಿ/ಎಸ್‌ಟಿ ಸಮುದಾಯದವರಿಗೆ ಮಾತ್ರ ಸೀಮಿತವಾಗಿಲ್ಲ, ಎಲ್ಲ ಜಾತಿ ಧರ್ಮದವರು ಈ ಯಾತ್ರೆಯಲ್ಲಿ ಭಾಗವಹಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ‘ತಣ್ಣೀರು’ ಆಲ್ಬಂಸಾಂಗ್ ಬಿಡುಗಡೆ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಉತ್ತರ ಕರ್ನಾಟಕದ ಯುವ ಪ್ರತಿಭೆ ನಿರ್ದೇಶಿಸಿರುವ ಮತ್ತು ಹೊಸಪ್ರತಿಭೆಗಳು ಅಭಿನಯಿಸಿರುವ ‘ತಣ್ಣೀರು’ ಆಲ್ಬಂಸಾಂಗ್ ಯೂಟ್ಯೂಬ್‌ನಲ್ಲಿ ಬಿಡುಗಡೆಯಾಗಿ ಭರ್ಜರಿ ಸದ್ದು ಮಾಡುತ್ತಿದೆ.



ಹುಡುಗರು ತಾನು ಪ್ರೀತಿಸಿದ ಹುಡುಗಿಗೆ ಎಷ್ಟೇ ಕಾಳಜಿ ಮಾಡಿ, ಎಷ್ಟೇ ಪ್ರೀತಿ ತೋರಿಸಿದರೂ ಕೊನೆಗೆ ಬಿಟ್ಟು ಹೋಗುತಾರೆ. ಯಾವುದೇ ಕಾರಣಕ್ಕೂ ಪ್ರೀತಿ ಸ್ವಾರ್ಥ ಆಗಬಾರದು, ಸ್ಫೂರ್ತಿ ಆಗಬೇಕು ಎಂಬುದು ಈ ಗೀತೆಯ ಸಾರ. ಕನ್ನಡ ಚಿತ್ರರಂಗ ಹಾಗೂ ರಂಗಭೂಮಿಯಲ್ಲಿ ಹಲವು ನಾಟಕಗಳನ್ನು ನಿರ್ದೇಶನ ಮಾಡಿ, ಹಲವಾರು ಚಿತ್ರಗಳಿಗೆ, ಧಾರಾವಾಹಿಗಳಿಗೆ ನಿರ್ದೇಶನ ವಿಭಾಗದಲ್ಲಿ ಕಾರ್ಯ ನಿರ್ವಹಿಸಿರುವ ವಿಜಯಪೂರ ಮೂಲದ ಉತ್ಸಾಹಿ ಯುವಕ ಪವನ್ ಕುಮಾರ್ ಬೂದಿಹಾಳ ನಿರ್ದೇಶನ ಮಾಡಿದ್ದಾರೆ.

ಮುಖ್ಯ ಕಲಾವಿದರಾಗಿ ಶ್ರೀಧರ ನಟಿಸಿದ್ದಾರೆ. ನಟಿ ನಿಧಿಗೌಡ, ದೀಕ್ಷಿತಾ, ಮಧು, ಪೀರು, ನವೀನ್, ರವಿ ಕರಿಚಿರತೆ ಅಭಿನಯಿಸಿದ್ದು, ಸಹಜ ಅಭಿನಯದ ಮೂಲಕ ಪ್ರೇಕ್ಷಕರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಛಾಯಾಗ್ರಹಣ ಚಂದ್ರಸೇನ, ಸಂಕಲನ ಜಸ್ವವಂತ, ಫಯಾಜ್ ಕುಷ್ಟಗಿ ಮ್ಯೂಜಿಕ್, ಗುಡ್ಡಪ್ಪ ಮಾಸ್ತರ, ಯಲಿವಾಲ ಉಪ್ಪಾರ, ಯಲ್ಲಪ್ಪ ಮಾಸ್ತರ ಸಾಹಿತ್ಯ ರಚಿಸಿದ್ದಾರೆ. ಜಿ.ಪಿ. ಕೋರಿಯೋಗ್ರಾಫರ್ ನವೀನ ಎಂಜೆ, ಗುಡ್ಡಪ್ ಮಾಸ್ತರ ಹಳಿಯಾಳ ಹಾಡಿದ್ದು, ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ ಅವರದಿದೆ. ಕಲ್ಪನೆ ಮತ್ತು ನಿರ್ದೇಶನವನ್ನು ಪವನಕುಮಾರ ಬೂದಿಹಾಳ ಮಾಡಿದ್ದಾರೆ. ಕಾವೇರಿ ನಾಗಪ್ಪ ಹನಗುಂದಿ ನಿರ್ಮಿಸಿದ್ದಾರೆ. ನಿಧಿಗೌಡ ಯೂಟ್ಯೂಬ್ ಚಾನೆಲ್‌ನಲ್ಲಿ ಹಾಡು ಬಿಡುಗಡೆಯಾಗಿದ್ದು, ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸಬೇಕು ಎಂದು ನಿರ್ದೇಶಕ ಪವನಕುವಾರ ವಿನಂತಿಸಿದ್ದಾರೆ.

## ಬೆಂಗಳೂರಿನ ಪ್ರತಿಷ್ಟಿತ ಸಾಫ್ಟ್‌ವೇರ್ ವಿಪ್ರೋ ಕಂಪನಿಯ ಉದ್ಯೋಗಿ ಆತ್ಮಹತ್ಯೆ!

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು



ಎಲೆಕ್ಟ್ರಾನಿಕ್ ಸಿಟಿಯ ನೀಲಾದ್ರಿ ನಗರದಲ್ಲಿ ಪ್ರತಿಷ್ಟಿತ ಸಾಫ್ಟ್‌ವೇರ್ ವಿಪ್ರೋ ಕಂಪನಿಯ ಉದ್ಯೋಗಿ ಸೂಸೈಡ್ ಮಾಡಿಕೊಂಡ ಘಟನೆ ಜರುಗಿದೆ. 22 ವರ್ಷದ ಯಾಗ್ನಿಕ್ ಮೃತ ದುರ್ದೈವಿ. ಆಗಸ್ಟ್ 16 ರಂದು ಹೋಟೆಲ್ ನಲ್ಲಿ ಯಾಗ್ನಿಕ್ ರೂಂ ಬಾಡಿಗೆಗೆ ಪಡೆದಿದ್ದು, ಬಲೂನ್ ತುಂಬಲು ಬಳಸುವ ಇಲಿಯಂ ಗ್ಯಾಸ್ ಬಳಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗ್ಯಾಸ್ ಸಿಲಿಂಡರ್ ತಂದು ಬೃಹದಾಕಾರದ ಕವರ್ ನಿಂದ ಇಡೀ ದೇಹಕ್ಕೆ ಸುತ್ತಿಕೊಂಡು ಗ್ಯಾಸ್ ಪೈಪ್ ಬಾಯೊಳಗೆ ಹಾಕಿ ಗ್ಯಾಸ್ ಆನ್ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇನ್ನೂ ಮಾಹಿತಿ ಆಧರಿಸಿ ಘಟನಾ ಸ್ಥಳಕ್ಕೆ ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

## ಹಳ್ಳ ದಾಟುವಾಗ ಹರಿಯುವ ನೀರಲ್ಲಿ ಸಿಕ್ಕಿಕೊಂಡ ವ್ಯಕ್ತಿ! ಕೂದಲೆಳೆ ಅಂತರದಲ್ಲಿ ಪಾರು

■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ವ್ಯಕ್ತಿಯೊಬ್ಬರು ಹಳ್ಳ ದಾಟುವಾಗಲೇ ನೋಡ ನೋಡುತ್ತಿದ್ದಂತೆ ನೀರು ರಭಸವಾಗಿ ಹರಿದು ಬಂದಿದೆ. ಬೈಕ್ ಸಮೇತ ನೀರಲ್ಲಿ ಕೊಚ್ಚಿ ಹೋಗುತ್ತಿದ್ದ ಬೈಕ್ ಸವಾರ ಕೂದಲೆಳೆ ಅಂತರದಲ್ಲಿ ಪಾರಾಗಿರುವ ಘಟನೆ ಹರಪನಹಳ್ಳಿ ತಾಲೂಕಿನ ಹೊಸಹಳ್ಳಿ ಸೇತುವೆ ಬಳಿ ನಡೆದಿದೆ.

ಮಲ್ಲೇಶ್(61) ಸಾವಿನ ದವಡೆಯಿಂದ ಪಾರಾದವರು. ಮೈ ಜುಮ್ ಎನ್ನಿಸುವ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಸ್ಥಳೀಯರು ಮಲ್ಲೇಶ್‌ರ ಕೈ ಹಿಡಿದು ಎಳೆದು ಪಾರು ಮಾಡಿದ್ದಾರೆ.



## ಜನನಿಬಿಡ ಪ್ರದೇಶದಲ್ಲಿ ತನ್ನ ಗರಿಗಳನ್ನ ಬಿಚ್ಚಿ ನಾಟ್ಯ ಶೈಲಿಯಲ್ಲಿ ಕಂಗೊಳಿಸಿದ ನವಿಲು!



■ವಿಜಯಸಾಕ್ಷಿ ಸುದ್ದಿ, ಗದಗ

ನವಿಲುಗಳು ಸೌಂದರ್ಯಕ್ಕೆ ಮಾತ್ರವಲ್ಲದೆ ನಾಟ್ಯಕ್ಕೂ ಹೆಸರಾದ ಪಕ್ಷಿ. ಇಂತಹ ನವಿಲುಗಳ ನಾಟ್ಯವನ್ನು ನೋಡಲು ಎರಡು ಕಣ್ಣು ಸಾಲದು. ಆದರೆ ನವಿಲುಗಳ ನಾಟ್ಯ ಪ್ರದರ್ಶನ ಕಾಣಸಿಗುವುದು ಬಹಳ ಅಪರೂಪ. ಹಾಗಿರುವಾಗ ಇದೀಗ ಇಲ್ಲೊಂದು ಮಯೂರನ ನಾಟ್ಯದ ಸುಂದರ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ನವಿಲಿನ ಅದ್ಭುತ ನಾಟ್ಯವನ್ನು ಕಂಡು ನೋಡುಗರ ಮನ ಸೋತಿದ್ದಾರೆ.

ಹೌದು ಗದಗ ಜಿಲ್ಲೆ ಮುಂಡರಗಿ ತಾ.ಹಾರೋಗೇರಿ ಗ್ರಾಮದಲ್ಲಿ ನವಿಲಿನ ನಾಟ್ಯಕ್ಕೆ ಮನಸೋತಿದ್ದಾರೆ. ಸ್ವಚ್ಛಂದವಾಗಿ ತನ್ನ ಗರಿಗಳನ್ನ ಬಿಚ್ಚಿ ನಾಟ್ಯ ಶೈಲಿಯಲ್ಲಿ ಕಂಗೊಳಿಸಿದ ನವಿಲನ್ನು ನೋಡಲು ಎರಡು ಕಣ್ಣು ಸಾಲದು.

ಗ್ರಾಮಕ್ಕೆ ಪ್ರತಿನಿತ್ಯ ಆಗಮಿಸಿ ಪಾರಿವಾಳ, ಕೋಳಿಗಳ ಗುಂಪಿನೊಂದಿಗೆ ಸೇರಿ ಕೆಲಹೊತ್ತು ಸಮಯ ಕಳೆಯುತ್ತದೆ ಈ ನವಿಲು, ನವಿಲಿನ ನಾಟ್ಯದಾಟವನ್ನ ಪ್ರತಿದಿನ ಗ್ರಾಮಸ್ಥರು ಕಣ್ತುಂಬಿಕೊಳ್ಳುತ್ತಾರೆ. ನವಿಲಿನ ನಾಟ್ಯವನ್ನ ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದ್ದಾರೆ. ಸದ್ಯ ಸಾಮಾಜಿಕ ಜಾಲತಾಣದಲ್ಲಿ ತನ್ನ ಸುಂದರ ಗರಿಗಳನ್ನು ಬಿಚ್ಚಿ ನೃತ್ಯ ಮಾಡುತ್ತಿರುವಂತಹ ನವಿಲಿನ ವಿಡಿಯೋ ವೈರಲ್ ಆಗುತ್ತಿದೆ.

### ಡಿ. ದೇವರಾಜು ಅರಸು ಅವರ 109ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ದಿವ್ಯ ಪ್ರಭು

# ದೇವರಾಜ ಅರಸು ಸಾಮಾಜಿಕ ನ್ಯಾಯದ ಹರಿಕಾರ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ದೇವರಾಜ ಅರಸು ಕರ್ನಾಟಕ ಕಂಡ ಅಪರೂಪದ ರಾಜಕಾರಣಿ. ಬಡವರ, ಹಿಂದುಳಿದವರ ಪರವಾಗಿ ನಿಂತು ಸಾಮಾಜಿಕ ಮತ್ತು ಮೂಲಭೂತ ಅವಶ್ಯಕತೆಗಳನ್ನು ಒದಗಿಸಿದವರು. ಇವರು ಶಿಕ್ಷಣ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಪಾರವಾಗಿದೆ. ಲಕ್ಷಾಂತರ ವಿದ್ಯಾರ್ಥಿ ವಸತಿ ನಿಲಯಗಳನ್ನು ಕಟ್ಟಿಸಿ, ಸಾಮಾಜಿಕ ನ್ಯಾಯದ ಪರವಾಗಿ ಧ್ವನಿ ಎತ್ತಿದ ಇವರು ತಮ್ಮ ಆಧಿಕಾರದ ಸಂದರ್ಭದಲ್ಲಿ ಸಮಾಜದಲ್ಲಿದ್ದ ಎಲ್ಲ ವರ್ಗದವರ ಪರವಾಗಿ ಶ್ರಮಿಸಿದರು ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅಭಿಪ್ರಾಯಪಟ್ಟರು.

ಅವರು ಮಂಗಳವಾರ ಬೆಳಿಗ್ಗೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಲಾಗಿದ್ದ ಡಿ. ದೇವರಾಜು ಅರಸು ಅವರ 109ನೇ ಜನ್ಮ ದಿನಾಚರಣೆಯ ಅಂಗವಾಗಿ ಡಿ. ದೇವರಾಜು ಅರಸು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.



ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಡಿ.ದೇವರಾಜು ಅರಸು ಪ್ರಶಸ್ತಿ ಪುರಸ್ಕೃತ ಶಶಿಧರ ತೋಡಕರ ಮಾತನಾಡಿ, ಸಾಮಾಜಿಕ ಬದಲಾವಣೆ, ಬಡತನ ನಿರ್ಮೂಲನೆ, ಮನೆಗಳ ನಿರ್ಮಾಣದಲ್ಲಿ ಅದ್ವಿತೀಯ ಕೆಲಸ ಮಾಡಿದ್ದಾರೆ. ಜಿಲ್ಲೆಯಲ್ಲಿ ಹಿಂದುಳಿದ ವರ್ಗದ ವಸತಿ ನಿಲಯದಲ್ಲಿ ವಿದ್ಯಾಭ್ಯಾಸ ಮಾಡುವ ಮಕ್ಕಳು ದೇವರಾಜು ಅರಸು ಅವರ ಮಾರ್ಗದಲ್ಲಿ ನಡೆಯಬೇಕು. ಹಿಂದುಳಿದ ವರ್ಗದವರ ಅಭಿವೃದ್ಧಿಗೆ ಬುನಾದಿ ಹಾಕಿದ ಕೀರ್ತಿ ಅರಸು ಅವರದು. 70-80ರ ದಶಕದಲ್ಲಿ ಸಾಮಾಜಿಕ ಬದಲಾವಣೆಗೆ ಕಾರಣವಾದ ನ್ಯಾಯ ಪ್ರತೀಕನೆಂಬ ಖ್ಯಾತಿಗೂ ಪಾತ್ರರಾಗಿದ್ದಾರೆ ಎಂದು ಹೇಳಿದರು.

ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ. ನಾಗರಾಜ ಎಸ್ ಡಿ.ದೇವರಾಜು ಅರಸು ಅವರ ಶೈಕ್ಷಣಿಕ ಜೀವನದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಡಿ. ದೇವರಾಜು ಅರಸು ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಕುಶಾಲ್, ನಾಮ ನಿರ್ದೇಶಿತ ಸದಸ್ಯ ಗುರುನಾಥ ಹುಲಗಾರ, ಅಲೆಮಾರಿ ಸಮುದಾಯದ ಮುಖಂಡ ರಾಜು ವೇಲಕರ, ಈಶ್ವರ ಬೆಳ್ಳಿಗಟ್ಟಿ ಇದ್ದರು. ಅಲ್ಪ ಸಂಖ್ಯಾತರ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಗೋಪಾಲ ಲಮಾಣಿ ಅಥಿತಿಗಳ ಪರಿಚಯ ಮಾಡಿದರು. ರವಿ ಕುಲಕರ್ಣಿ ಕಾರ್ಯಕ್ರಮವನ್ನು ನಿರೂಪಿಸಿದರೆ, ಗೀತಾ ಹೂಗಾರ ವಂದಿಸಿದರು.

ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ವಸತಿ ನೀಲಯದ ನಿಲಯ ಪಾಲಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

> ಸಮಾಜದಲ್ಲಿ ದೇವರಾಜು ಅರಸು ಅವರಂತಹ ವ್ಯಕ್ತಿಗಳು ಇದ್ದಾಗ ಮಾತ್ರ ಸಮಾಜ ಸುಧಾರಣೆಯಾಗುತ್ತದೆ. ದೇವರಾಜು ಅರಸು ಅವರು ಕ್ರಾಂತಿಕಾರಿ ಹೋರಾಟಗಾರರಾಗಿದ್ದರು. ನಾವು ಮಾಡುತ್ತಿರುವ ಕಾಯಕದ ಬಗ್ಗೆ ಕೀಳರಿಮೆ ಪಡಬಾರದು. ದೇವರಾಜು ಅರಸು ಅವರ ಪ್ರತಿಯೊಂದು ತತ್ವ, ಆದರ್ಶಗಳನ್ನು ಪಾಲಿಸೋಣ. ಅವರ ಕೆಲವೊಂದು ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ.
>
> – ದಿವ್ಯ ಪ್ರಭು.
> ಜಿಲ್ಲಾಧಿಕಾರಿಗಳು, ಧಾರವಾಡ.

# ಉಚಿತ ಪ್ರಾಯೋಗಿಕ ಚಲನಚಿತ್ರ ತರಬೇತಿ ಶಿಬಿರ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು


ಹೈದರಾಬಾದ್‌ನ ಟೆನ್ ಟ್ರೀಸ್ ಫಿಲ್ಮ್ ಪ್ರೊಡಕ್ಷನ್ ಹೌಸ್‌ನ ಸಹಯೋಗದಲ್ಲಿ ನಗರದ ಸ್ನೇಹಾಲಯಂ ಚಾರಿಟಬಲ್ ಟ್ರಸ್ಟ್ ಆಗಸ್ಟ್ 24ರಿಂದ 26ರವರೆಗೆ 3 ದಿನಗಳ ಉಚಿತ ಅಲ್ಪಾವಧಿ ಪ್ರಾಯೋಗಿಕ ಚಲನಚಿತ್ರ ತರಬೇತಿ ಶಿಬಿರವನ್ನು ಹಮ್ಮಿಕೊಂಡಿದೆ.

ಶಿಬಿರದಲ್ಲಿ ಚಲನಚಿತ್ರ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡುವ ಬಗ್ಗೆ, ಛಾಯಾಗ್ರಹಣ, ಸಂಕಲನ, ಎಡಿಟಿಂಗ್ ರಿಪೋರ್ಟ್, ಕಂಟ್ಯೂನಿಟಿ ರಿಪೋರ್ಟ್ ಬರೆಯುವ ವಿಧಾನ, ಸಿನಿಮಾ ಮಾರುಕಟ್ಟೆಯಲ್ಲಿ ಸಿನಿಮಾ ಬಡ್ಜೆಟ್‌ನ ಪ್ರಾಮುಖ್ಯತೆ ಹಾಗೂ ಸಿನಿಮಾ ಸೆನ್ಸಾರ್ ಪಡೆಯುವ ಸಂಪೂರ್ಣ ಮಾಹಿತಿಯನ್ನು ಖ್ಯಾತ ಕಲಾವಿದರು ಮತ್ತು ತಂತ್ರಜ್ಞರಿಂದ ತರಬೇತಿ ನೀಡಲಾಗುತ್ತದೆ. ದೂರದಿಂದ ಬರುವ ಶಿಬಿರಾರ್ಥಿಗಳಿಗೆ ಊಟ-ವಸತಿ ವ್ಯವಸ್ಥೆ ಇದ್ದು, ಭಾಗವಹಿದ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ನೀಡಲಾಗುವುದು.

ಕನಿಷ್ಠ 10ನೇ ತರಗತಿ ಉತ್ತೀರ್ಣರಾಗಿರವ ಆಸಕ್ತರು ತಮ್ಮ ಇತ್ತೀಚಿನ ಎರಡು ಭಾವಚಿತ್ರ ಮತ್ತು ಸ್ವ ವಿವರಗಳೊಂದಿಗೆ ಕಾರ್ಯದರ್ಶಿ, ಸ್ನೇಹಾಲಯಂ ಚಾರಿಟಬಲ್ ಟ್ರಸ್ಟ್, ಹೊಸಕೋಟೆ-ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮೊಬೈಲ್ ಸಂಖ್ಯೆ-9000444557 tentreesfilmproductio@gmail.com ನ್ನು ಸಂಪರ್ಕಿಸಬಹುದು.

### ಮನೋರಮಾ ಕಾಲೇಜಿನ

# ಬಿಸಿಎ 1ನೇ ಸೆಮಿಸ್ಟರ್ ಪರೀಕ್ಷೆ ಫಲಿತಾಂಶ




■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮನೋರಮಾ ಮಹಾವಿದ್ಯಾಲಯದ ಶೈಕ್ಷಣಿಕ ಸಾಲಿನ ಬಿಸಿಎ ಕೋರ್ಸಿನ 1ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಸಾಗರ ಅಗಡಿ 661 ಅಂಕ ಪಡೆದು ಪ್ರಥಮ ಸ್ಥಾನ, ಸುಜಾತಾ ಓಡ್ಸುಮಠ 656 ಅಂಕ ಪಡೆದು ದ್ವಿತೀಯ ಸ್ಥಾನ, ಅಭಿಷೇಕ ಹಬೀಬ 647 ಅಂಕ ಪಡೆದು ತೃತೀಯ ಸ್ಥಾನ, ರಾಜಶ್ರೀ ಕಬಾಡಿ 646 ಅಂಕ ಪಡೆದು 4ನೇ ಸ್ಥಾನ, ಸ್ನೇಹಾ ಮಾಳಶೆಟ್ಟಿ 639 ಅಂಕ ಪಡೆದು 5ನೇ ಸ್ಥಾನ ಪಡೆದುಕೊಂಡಿದ್ದಾರೆ.

ಮಹಾವಿದ್ಯಾಲಯಕ್ಕೆ ಕೀರ್ತಿ ತಂದ ವಿದ್ಯಾರ್ಥಿಗಳ ಸಾಧನೆಯನ್ನು ಸಂಸ್ಥೆಯ ಚೇರಮನ್ ಎನ್.ಎಮ್. ಕುಡತರಕರ, ಪ್ರಾಚಾರ್ಯ ಬಿ.ಎಸ್. ಹಿರೇಮಠ, ಸಂಸ್ಥೆಯ ಕಾರ್ಯದರ್ಶಿ ಮಂಜುನಾಥ ಕುಡತರಕರ, ಆಡಳಿತಾಧಿಕಾರಿ ಕಿಶೋರ ಮುದಗಲ್ಲ, ಸಂಸ್ಥೆಯ ನಿರ್ದೇಶಕರಾದ ಸಂಜಯ ಕುಡತರಕರ, ಚೇತನ ಕುಡತರಕರ, ಸಹ ಸಂಯೋಜಕರಾದ ಪ್ರೊ. ಸವಿತಾ ಪೂಜಾರ ಹಾಗೂ ಸಿಬ್ಬಂದಿ ವರ್ಗದವರು ಶ್ಲಾಘಿಸಿದ್ದಾರೆ.

# ನದಾಫ-ಪಿಂಜಾರ ಜಿಲ್ಲಾ ಘಟಕದ ಸರ್ವ ಸದಸ್ಯರ ಆಡಳಿತ ಸಮಿತಿ ವಿಶೇಷ ಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ

ಅಕ್ಟೋಬರ್ ತಿಂಗಳಲ್ಲಿ ನದಾಫ-ಪಿಂಜಾರ ಸಂಘದಿಂದ ರಾಜ್ಯ ಮಟ್ಟದ 'ಸಂಸ್ಥಾಪನಾ ದಿನಾಚರಣೆ'ಯನ್ನು ಆಸಕ್ತ ಜಿಲ್ಲೆಯವರ ಸಹಯೋಗದಲ್ಲಿ ಗದಗ ಜಿಲ್ಲೆಯಲ್ಲಿ ಆಚರಣೆ ಮಾಡಲು ತೀರ್ಮಾನಿಸಿದೆ.

ಈ ಕುರಿತಂತೆ ಪೂರ್ವಭಾವಿಯಾಗಿ ರಾಜ್ಯ ಪದಾಧಿಕಾರಿಗಳ ನ್ನೊಳಗೊಂಡು ಜಿಲ್ಲಾ ಘಟಕ ಹಾಗೂ ಮಹಿಳಾ ಜಿಲ್ಲಾ ಘಟಕದ ಆಡಳಿತ ಸಮಿತಿಯ ಸರ್ವ ಸದಸ್ಯರ ಸಭೆಯನ್ನು ಸಂಘದ ಗದಗ ಜಿಲ್ಲಾಧ್ಯಕ್ಷ ಜನಾಬ ಖಾದರಸಾಬ ಹಳ್ಯಾಳ ಇವರ ಅಧ್ಯಕ್ಷತೆಯಲ್ಲಿ, ಆಗಸ್ಟ್ 24ರ ಮುಂಜಾನೆ 10 ಗಂಟೆಗೆ ಕರೆಯಲಾಗಿದೆ.

ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಮುಖ್ಯ ಅತಿಥಿಗಳಿಗೆ ಆಹ್ವಾನ, ಪ್ರತಿಭಾನ್ವಿತ ವಿದ್ಯಾರ್ಥಿಗಳ, ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿದ ಸಾಧಕರ ಹಾಗೂ ಇತರ ರಂಗಗಳಲ್ಲಿಯ ಸಾಧಕರು, ಗಣ್ಯರಿಗೆ ಪುರಸ್ಕಾರ, ಗೌರವ ಸನ್ಮಾನ ಮಾಡುವ ಕುರಿತು ಚರ್ಚಿಸಲಾಗುವುದು. ಈ ಸಭೆಯಲ್ಲಿ ರಾಜ್ಯ ಘಟಕದ ಪದಾಧಿಕಾರಿಗಳು ಉಪಸ್ಥಿತರಿರಲು ಸಂಘದ ಪ್ರಕಟಣೆ ತಿಳಿಸಿದೆ.

# ಗಜಾನನೋತ್ಸವ ಸಮಿತಿಗೆ ಪದಾಧಿಕಾರಿಗಳ ಆಯ್ಕೆ




■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಹಳೇ ಸರಾಫ್ ಬಜಾರದ ಶ್ರೀ ಜಗದಂಬಾ ದೇವಸ್ಥಾನದ ಸಹಸ್ರಾರ್ಜುನ ಸಮುದಾಯ ಭವನದ ಲಕ್ಷ್ಮಣಸಾ ಸಭಾಗೃಹದಲ್ಲಿ 2024-25ನೇ ಸಾಲಿನ ಗಜಾನನೋತ್ಸವದ ಪೂರ್ವಭಾವಿ ಸಭೆ ಜರುಗಿತು.

ಎಸ್‌ಎಸ್‌ಕೆ ಸಮಾಜದ ತರುಣ ಸಂಘದ ಉಪಾಧ್ಯಕ್ಷ ಮಾಧೂಸಾ ವಿಶ್ವನಾಥಸಾ ಬದಿ ಇವರ ಅಧ್ಯಕ್ಷತೆಯಲ್ಲಿ ಗಜಾನನೋತ್ಸವದ ಉಪ-ಸಮಿತಿಯ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಸಮಿತಿಯ ಚೇರಮನ್‌ರಾಗಿ ರಾಮಚಂದ್ರಸಾ ಶಿದ್ಲಿಂಗ, ವೈಸ್ ಚೇರಮನ್‌ರಾಗಿ ಪ್ರಶಾಂತ ಕಾಟವ, ಗೌರವ ಕಾರ್ಯದರ್ಶಿಯಾಗಿ ಜಗದೀಶ ಪವಾರ, ಸಹಕಾರ್ಯದರ್ಶಿಯಗಿ ಕಾರ್ತಿಕ ಲದ್ವಾ, ಖಜಾಂಚಿಯಾಗಿ ಉಮೇಶ ಹಬೀಬ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಪೂಜಾ ಸಮಿತಿ, ದಾಸೋಹ ಸಮಿತಿ, ಅಲಂಕಾರ ಸಮಿತಿ, ಕ್ರೀಡಾ ಸಮಿತಿ, ಮೆರವಣಿಗೆ ಸಮಿತಿ, ಸಾಂಸ್ಕೃತಿಕ ಕಾರ್ಯಕ್ರಮ ಸಮಿತಿ ಸೇರಿದಂತೆ ಇತರೆ ಉಪ ಸಮಿತಿಗಳನ್ನು ರಚಿಸಲಾಯಿತು. ಸಭೆಯಲ್ಲಿ ಎಸ್‌ಎಸ್‌ಕೆ ಸಮಾಜ ತರುಣ ಸಂಘದ ಗೌರವ ಕಾರ್ಯದರ್ಶಿ ನಾಗರಾಜ ಖೋಡೆ, ಸಹ ಕಾರ್ಯದರ್ಶಿ ಶ್ರೀಕಾಂತ ಬಾಕಳೆ, ಖಜಾಂಚಿ ಶ್ರೀನಿವಾಸ ಬಾಂಡಗೆ, ಸದಸ್ಯರಾದ ಶ್ರೀಕಾಂತ ಅರಸಿದ್ದಿ, ರಾಘವೇಂದ್ರ ಬಾಂಡಗೆ, ಪರಶುರಾಮ ಬದಿ, ನೇಮಚಂದ ಪವಾರ, ವೆಂಕಟೇಶ ಹಬೀಬ, ಕಿಶನ ಮೆಹರವಾಡೆ, ಸಂದೀಪ ಕಾಟಿಗರ, ಪ್ರವೀಣ ಜಿತೂರಿ, ಸಂದೀಪ ಕಬಾಡಿ, ಚಂದನ ಖಟವಟೆ ಮುಂತಾದವರು ಉಪಸ್ಥಿತರಿದ್ದರು.

# ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯ ಮೀನುಗಾರಿಕೆ ಇಲಾಖೆ ವತಿಯಿಂದ 2024-25 ನೇ ಸಾಲಿನ ಜಿಲ್ಲಾ ಪಂಚಾಯತಿಯ ಮತ್ಸ್ಯ ವಾಹಿನಿ ಯೋಜನೆಯಡಿ ದ್ವಿಚಕ್ರ ವಾಹನ ಮತ್ತು ಐಸ್ ಬಾಸ್ಕ್ ಖರೀದಿಸಿದವರಿಗೆ ಸಹಾಯಧನ ನೀಡಲು ಹಾಗೂ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ಮೀನುಗಾರರಿಗೆ ಉಚಿತವಾಗಿ ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿಆಹ್ವಾನಿಸಲಾಗಿದೆ.

ಅರ್ಜಿಗಳನ್ನು gadag.nic.in ವೆಬ್ಸೈಟ್ ಮೂಲಕ ಸೆಪ್ಟೆಂಬರ್ 30 ರೊಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರು, ಮುಂಡರಗಿ, ಹಾಗೂ ಉಪನಿರ್ದೇಶಕರನ್ನು ಮೊಬೈಲ್ ಸಂಖ್ಯೆ ಮೂಲಕ 8095792530 ಸಂಪರ್ಕಿಸಬಹುದಾಗಿದೆ.

# ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಲ್ಲಿ 2024-25ನೇ ಸಾಲಿನ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವತಿಯಿಂದ 15 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ದೈಹಿಕ ವಿಕಲಚೇತನರಿಗಾಗಿ ಅನುಷ್ಠಾನಗೊಳ್ಳುತ್ತಿರುವ ಬ್ಯಾಟರಿ ಚಾಲಿತ ವ್ಹೀಲ್ ಚೇರ್ ಯೋಜನೆಯಡಿ ವಿಕಲಚೇತನ ಫಲಾನುಭವಿಗಳು ತಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ವಿ.ಆರ್. ಡಬ್ಲ್ಯೂ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿರುವ ಯು.ಆರ್.ಡಬ್ಲ್ಯೂ ಹಾಗೂ ತಾಲೂಕು ಪಂಚಾಯತಿಯಲ್ಲಿರುವ ಎಮ್.ಆರ್.ಡಬ್ಲ್ಯೂಗಳಲ್ಲಿ ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ ಸೆಪ್ಟೆಂಬರ್ 28 ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಈ ಸೌಲಭ್ಯ ಪಡೆಯುವ 15 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ದೈಹಿಕ ವಿಕಲಚೇತನರು ಸರ್ಕಾರ / ಇಲಾಖೆಯ ಯೋಜನೆಯಡಿ / ಶಾಸಕರು ಹಾಗೂ ಸಂಸಧರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ / ಸ್ಥಳೀಯ ಸಂಘ-ಸಂಸ್ಥೆ / ಬೇರೆ ಯಾವುದೇ ಇಲಾಖೆಯಿಂದ ಈ ಮೊದಲು ವಿಕಲಚೇತನರ ಬ್ಯಾಟರಿ ಚಾಲಿತ ವ್ಹೀಲ್‌ಚೇರ್ ಪಡೆದಿರಬಾರದು.

ಹೆಚ್ಚಿನ ಮಾಹಿತಿಗಾಗಿ ಗದಗ ಜಿಲ್ಲೆಯ ತಾಲೂಕು ಪಂಚಾಯತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಮ್.ಆರ್.ಡಬ್ಲ್ಯೂ ತಾಲೂಕು ಪಂಚಾಯತ್, ಗದಗ 8867556465, ಎಮ್.ಆರ್.ಡಬ್ಲ್ಯೂ ತಾಲೂಕು ಪಂಚಾಯತ್, ರೋಣ - 9741615926, ಎಮ್.ಆರ್.ಡಬ್ಲ್ಯೂ, ತಾಲೂಕು ಪಂಚಾಯತ್, ಮುಂಡರಗಿ 9611922445, ಎಮ್.ಆರ್. ಡಬ್ಲ್ಯೂ ತಾಲೂಕು ಪಂಚಾಯತ್, ಶಿರಹಟ್ಟಿ 8951128679 ಎಮ್. ಆರ್.ಡಬ್ಲ್ಯೂ, ತಾಲೂಕು ಪಂಚಾಯತ್, ನರಗುಂದ - 9591679022 ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಗದಗ ಜಿಲ್ಲಾಡಳಿತ ಭವನ, ಕೊಠಡಿ ಸಂಖ್ಯೆ: 029 ರ ದೂರವಾಣಿ ಸಂಖ್ಯೆ: 08372-220419 ಮೂಲಕ ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಿಧನ ವಾರ್ತೆ

### ಫಕೀರಶೆಟ್ಟಿ ವೀರಪ್ಪ ವಾಲಿ



ನರೇಗಲ್ಲ: ಸಮೀಪದ ಜಕ್ಕಲಿ ಗ್ರಾಮದ ನಿವಾಸಿ ಫಕೀರಶೆಟ್ಟಿ ವೀರಪ್ಪ ವಾಲಿ (62) ಇತ್ತೀಚೆಗೆ ನಿಧನರಾದರು. ಮೃತರಿಗೆ ಸಹೋದರ, ಮಕ್ಕಳು ಹಾಗೂ ಅಪಾರ ಬಂಧು-ಬಳಗದವರು ಇದ್ದಾರೆ. ಮೃತ ಫಕೀರಶೆಟ್ಟಿ ಅವರು ತಾನು ವಿಕಲಚೇತನನಾಗಿದ್ದರೂ ಕಳೆದ ಇಪ್ಪತ್ತು ವರ್ಷಗಳಿಂದ ಗ್ರಾಮದ ಪತ್ರಿಕಾ ವಿತರಕನಿಗೆ ಸಹಾಯಕನಾಗಿ ಕಾರ್ಯ ನಿರ್ವಹಿಸುತ್ತಿದ್ದರು.

### ಕ್ಲಾಸ್ ಬಂಕ್ ಮಾಡೋ ಹುಡುಗರೇ ಈ ಸ್ಟೋರಿ ಮಿಸ್ ಮಾಡ್ದೆ ನೋಡಿ!

# ಹುಡುಗಿಯರನ್ನ ಚುಡಾಯಿಸಿದರೆ ಬೀಳುತ್ತೆ ದುರ್ಗಾಪಡೆ ಕಜ್ಜಾಯ..!

■ ವಿಜಯಸಾಕ್ಷಿ ಸುದ್ದಿ, ದಾವಣಗೆರೆ

ರೋಡಲ್ಲಿ ಹೋಗೋ ಹುಡುಗಿಯರನ್ನು ಚುಡಾಯಿಸೋ ಹುಡುಗರೇ ಹುಷಾರ್. ಹುಡುಗಿಯರನ್ನು ಚುಡಾಯಿಸಿದರೆ ದುರ್ಗಾಪಡೆಯಿಂದ ಕಜ್ಜಾಯ ಗ್ಯಾರಂಟಿ. ಏನಿದು ಕಜ್ಜಾಯದ ಸ್ಟೋರಿ ಅಂತೀರಾ ಈ ಸುದ್ದಿ ಒಮ್ಮೆ ಓದಿ.




ಹೌದು, ಇತ್ತೀಚೆಗೆ ನಗರದಲ್ಲಿ ಪುಂಡರ ಹಾವಳಿ ಹೆಚ್ಚಾಗಿದೆ. ಒಂಟಿಯಾಗಿ ಓಡಾಡೋದು ಹೆಣ್ಣು ಮಕ್ಕಳಿಗೆ ಕಷ್ಟವಾಗಿಬಿಟ್ಟಿದೆ. ಒಂಟಿಯಾಗಿ ಹೋಗುವ ಹೆಣ್ಣು ಮಕ್ಕಳಿಗೆ ರೇಗಿಸೋದು, ಕೆಟ್ಟದಾಗಿ ಸನ್ನೆ ಮಾಡೋದು ಇದೆಲ್ಲದರಿಂದ ಬೇಸತ್ತಿರುವ ಹುಡುಗಿಯರು ಪೊಲೀಸರಿಗೆ ವಿಷಯ ಮುಟ್ಟಿಸಿ ತಮ್ಮ ನೋವು ತೋಡಿಕೊಂಡಿದ್ದಾರೆ.

ಇದರಿಂದ ಎಚ್ಚೆತ್ತ ಪೊಲೀಸ್ ಇಲಾಖೆಯ ದುರ್ಗಾಪಡೆ ದಾವಣಗೆರೆಯಲ್ಲಿ ಫುಲ್ ಆಕ್ಟಿವ್ ಆಗಿದೆ. ರೋಡ್ ರೋಮಿಯೋಗಳಿಗೆ, ಕ್ಲಾಸ್ ಬಂಕ್ ಮಾಡಿ ಪಾರ್ಕ್‌ನಲ್ಲಿದ್ದ ಯುವಕ ಯುವತಿಯರಿಗೆ ದುರ್ಗಾಪಡೆ ಕ್ಲಾಸ್ ತೆಗೆದುಕೊಂಡಿ-ದೆ. ನಡು ರಸ್ತೆಯಲ್ಲೇ ಯುವಕ ಯುವತಿಯರಿಗೆ ದುರ್ಗಾಪಡೆ ಕ್ಲಾಸ್ ತೆಗೆದುಕೊಳ್ಳಲಾಗಿದೆ.

ದಾವಣಗೆರೆಯ ಪ್ರಮುಖ ರಸ್ತೆ ಪಾರ್ಕ್ ಗಳಲ್ಲಿ ದುರ್ಗಾಪಡೆ ಆಕ್ಟಿವ್ ಆಗಿದ್ದು, ಕಾಲೇಜ್ ಬಿಟ್ಟು ಪಾರ್ಕ್‌ಗಳಲ್ಲಿ, ರೋಡ್‌ಗಳಲ್ಲಿ ತಿರುಗಾಡುತ್ತಿದ್ದ ವಿದ್ಯಾರ್ಥಿಗಳಿಗೆ ಕ್ಲಾಸ್ ತೆಗೆದುಕೊಂಡಿದ್ದಾರೆ.

ದಾವಣಗೆರೆಯಲ್ಲಿ ಯುವತಿಯರನ್ನು ಚುಡಾಯಿಸುತ್ತಿದ್ದ ಯುವಕರಿಗೆ ಪೊಲೀಸ್ ಇಲಾಖೆಯ ದುರ್ಗಾ ಪಡೆಯಿಂದ ಈ ಕ್ಲಾಸ್ ತೆಗೆದುಕೊಳ್ಳಲಾಗುತ್ತಿದ್ದು, ಪೊಲೀಸರ ಈ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ

# ನೇರ ಸಂದರ್ಶನ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಆಗಸ್ಟ್ 23ರಂದು ಬೆಳಿಗ್ಗೆ 10ರಿಂದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ರೂಮ್ ನಂಬರ್-215, ಜಿಲ್ಲಾಡಳಿತ ಭವನ ಗದಗ ಇಲ್ಲಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ. ಸದರಿ ನೇರ ಸಂದರ್ಶನದಲ್ಲಿ ಈ ಕೆಳಗಿನ ಕಂಪನಿಗಳು ಭಾಗವಹಿಸಲಿವೆ.

ಶ್ರೀ ರಾಮ್ ಲೈಫ್ ಇನ್ಸೂರನ್ಸ್, ಗದಗ: ವಿದ್ಯಾರ್ಹತೆ-ಯಾವುದೆ ಪದವಿ. ಹುದ್ದೆ-ಯೂನಿಟ್ ಮ್ಯಾನೇಜರ್. ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಅವಕಾಶವಿರುತ್ತದೆ. ವಯಸ್ಸು: 22ರಿಂದ 45 ವರ್ಷ.

ಅನ್ನಪೂರ್ಣ ಫೈನಾನ್ಸ್ ಪ್ರೈ. ಲಿ, ಗದಗ: ವಿದ್ಯಾರ್ಹತೆ-ಪಿಯುಸಿ, ಡಿಪ್ಲೋಮಾ ಅಥವಾ ಯಾವುದೇ ಪದವಿ. ಹುದ್ದೆ-ಫೀಲ್ಡ್ ಕ್ರೆಡಿಟ್ ಆಫೀಸರ್, ಡೆವಲಪ್‌ಮೆಂಟ್ ಆಫೀಸರ್ ಮತ್ತು ಅಸಿಸ್ಟೆಂಟ್ ಬ್ರಾಂಚ್ ಮ್ಯಾನೇಜರ್. ಕಡ್ಡಾಯವಾಗಿ ದ್ವಿಚಕ್ರ ವಾಹನ ಮತ್ತು ಚಾಲನಾ ಪರವಾನಿಗೆ ಇರಬೇಕು. ವಯಸ್ಸು-18ರಿಂದ 30 ವರ್ಷ.

ನೇರ ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ನೋಂದಣಿಯನ್ನು ನೇರಸಂದರ್ಶನದ ದಿನದಂದೇ ಮಾಡಿಸಬೇಕಾಗಿರುತ್ತದೆ. ಸಂದರ್ಶನದಲ್ಲಿ ಪಾಲ್ಗೊಳುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಅಂಕಪಟ್ಟಿಗಳ ಝೆರಾಕ್ಸ್ ಪ್ರತಿಗಳು, 2 ರೆಸ್ಯೂಮ (ಬಯೋಡಾಟಾ)ಪ್ರತಿಗಳು, ಮತ್ತು ಆಧಾರ್ ಕಾರ್ಡ್ ಝೆರಾಕ್ಸ್‌ನೊಂದಿಗೆ ಭಾಗವಹಿಸಬಹುದು. ಅಭ್ಯರ್ಥಿಗಳಿಗೆ ನೋಂದಣಿ ಕಡ್ಡಾಯವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ-08372-220609, 6363330688ಕ್ಕೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿ ಬಸವಂತ ಪಿ.ಎನ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜಾಗೃತಿ ಮಹಿಳಾ ಸ್ವಾವಲಂಬನ ಕಂಪ್ಯೂಟರ್ ತರಬೇತಿ ಕೇಂದ್ರ ಉದ್ಘಾಟನೆ

# ಮಹಿಳೆಯರು ಆರ್ಥಿಕವಾಗಿ ಸಬಲರಾಗಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ಇಂದಿನ ಆಧುನಿಕ ದಿನಗಳಲ್ಲಿ ವಿಜ್ಞಾನ ಮತ್ತು ತಾಂತ್ರಿಕತೆ ಸಾಕಷ್ಟು ಪ್ರಗತಿ ಹೊಂದಿದೆ. ಮಹಿಳೆಯರು ಕಂಪ್ಯೂಟರ್, ಹೊಲಿಗೆ ತರಬೇತಿ ಪಡೆದು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕೆಂದು ಮುಂಡರಗಿ -ನರಸಾಪೂರ ಜ.ಅನ್ನದಾನೀಶ್ವರ ಶಾಖಾ ಮಠದ ಪೂಜ್ಯ ಡಾ.ವಿರೇಶ್ವರ ಮಹಾಸ್ವಾಮಿಗಳು ಹೇಳಿದರು.

ಅವರು ನರಸಾಪೂರದ ಜವಳಿ ಭವನದಲ್ಲಿ ವ್ಹಿಆರ್‌ಎಲ್ ಪ್ರಾಯೋಜಿತ, ಲೋಕಹಿತ ಟ್ರಸ್ಟ್ ಸಂಚಾಲಿತ ಜಾಗೃತಿ ಮಹಿಳಾ ಸ್ವಾವಲಂಬನ ಕೇಂದ್ರದ ಕಂಪ್ಯೂಟರ್ ತರಬೇತಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು.

ತಾಂತ್ರಿಕತೆ ಎಂಬುದು ಆಧುನಿಕ ಜೀವನಕ್ಕೆ ಬೇಕಾದ ಪ್ರಮುಖ ಅಂಶವಾಗಿದೆ. ಅದನ್ನು ಮಹಿಳೆಯರಿಗೆ ತಲುಪಿಸುವ ಕಾರ್ಯವನ್ನು ಲೋಕಹಿತ ಟ್ರಸ್ಟ್ ಮಾಡುತ್ತಿರುವುದು ಶ್ಲಾಘನೀಯ. ಮಹಿಳೆಯರು ಯಾರಿಗೂ, ಯಾವುದರಲ್ಲಿಯೂ ಕಮ್ಮಿ ಇಲ್ಲ ಎಂಬುದನ್ನು ಈ ಟ್ರಸ್ಟ್ ನಿಜ ಮಾಡಲು ಹೊರಟಿದ್ದು, ಅದು ಸಂಪೂರ್ಣವಾಗಿ ಯಶಸ್ವಿಯಾಗಲೆಂದರು.




ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಬೆಟಗೇರಿ-ಗದಗ ಜವಳಿ ಉತ್ಪಾದಕರ ಸಂಘದ ಅಧ್ಯಕ್ಷ ಅನಿಲ ಗಡ್ಡಿ ಮಾತನಾಡಿ, ಮಹಿಳೆಯರನ್ನು ಸ್ವಾವಲಂಬಿಯನ್ನಾಗಿ ಮಾಡಲು ಮುಂದಾಗಿರುವ ಈ ಕೇಂದ್ರದ ಪ್ರಯತ್ನ ಫಲಿಸಲಿ. ಮಹಿಳೆಯರು ಇಲ್ಲಿ ಕಂಪ್ಯೂಟರ್ ತರಬೇತಿ ಪಡೆದು ಯಶಸ್ವಿಯಾಗಲಿ ಎಂದರು.

ಪ್ರಾಚಾರ್ಯ ಮಾರುತಿ ಕಟ್ಟಿಮನಿ ಪ್ರಾಸ್ತಾವಿಕವಾಗಿ ಮಾತನಾಡಿ, ಯಾವುದೇ ವಿದ್ಯೆಯನ್ನು ಕರಗತ ಮಾಡಿಕೊಳ್ಳಬೇಕೆಂದರೆ ಅದಕ್ಕೆ ತರಬೇತಿ ಅಗತ್ಯ. ಇಲ್ಲಿ ಮಹಿಳೆಯರಿಗೆ ಕಂಪ್ಯೂಟರ್ ತರಬೇತಿಗೆ ಅವಕಾಶ ಕಲ್ಪಿಸಿದ್ದು, ಇದರ ಸದ್ಬಳಕೆ ಆಗಬೇಕು ಎಂದರು.

ಅನನ್ಯ ಮಾಗುಂಡ ಪ್ರಾರ್ಥಿಸಿದರು. ರಾಘವೇಂದ್ರ ಆರಿ ಪರಿಚಯಿಸಿದರು, ಜ್ಯೋತಿ ಆರಿ ನಿರೂಪಿಸಿದರು. ಕೊನೆಗೆ ಮಲ್ಲಿಕಾರ್ಜುನ ಬೆಲ್ಲದ ವಂದಿಸಿದರು. ನಂತರ ನರಸಿಂಹ ಕಾಮಾರ್ತಿ, ಚೇತನ್ ಮೇಹರವಾಡೆ ಅವರು ರಕ್ಷಾಬಂಧನ ಕಾರ್ಯಕ್ರಮ ನೆರವೇರಿಸಿದರು. ನಾಗವೇಣಿ ಕಟ್ಟಿಮನಿ, ಲಲಿತಾಬಾಯಿ ಮೇಹರವಾಡೆ, ಉಮಾ ಚನ್ನಪ್ಪನವರ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

> ಅಧ್ಯಕ್ಷತೆ ವಹಿಸಿ ಮಾತನಾಡಿದ ಜಾಗೃತಿ ಮಹಿಳಾ ಸ್ವಾವಲಂಬನ ಕೇಂದ್ರ ಕರ್ನಾಟಕ ಉತ್ತರ ಪ್ರಾಂತದ ಅಧ್ಯಕ್ಷ ಮಂಜುನಾಥ ಚನ್ನಪ್ಪನವರ, ಸೇವಾ ಭಾರತಿ, ಲೋಕಹಿತ ಟ್ರಸ್ಟ್ ಸಮಾಜಮುಖಿಯಾಗಿ ಕಾರ್ಯ ಮಾಡುತ್ತಿದ್ದು, ಅದರ ಮುಂದುವರೆದ ಭಾಗವಾಗಿ ಈ ಕಂಪ್ಯೂಟರ್ ತರಬೇತಿ ಕೇಂದ್ರ ತೆರೆಯಲಾಗಿದೆ. ಇಲ್ಲಿ ತರಬೇತಿ ಪಡೆದ ಮಹಿಳೆ ತನ್ನ ಮನೆಯಲ್ಲಿ, ಪರಿಸರದ ಜನತೆ ಕಂಪ್ಯೂಟರ್ ಕಲಿಯಲು ಮಾರ್ಗದರ್ಶನ ಮಾಡಬೇಕು. ಅಂದಾಗ ಈ ತರಬೇತಿ ಸಾರ್ಥಕತೆ ಪಡೆಯುವದು ಎಂದರು.

# ಅನರ್ಹ ಬಿಪಿಎಲ್ ಕಾರ್ಡ್ ಪತ್ತೆ ಕಾರ್ಯ

■ವಿಜಯಸಾಕ್ಷಿ ಸುದ್ದಿ, ಗದಗ

ಸರ್ಕಾರದ ಆದೇಶ ಹಾಗೂ ಮಾರ್ಗಸೂಚಿಗಳನುಸಾರ ಅನರ್ಹ/ನಕಲಿ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುರಿತಂತೆ ಪತ್ತೆ ಹಚ್ಚುವ ಹಾಗೂ ಪರಿಶೀಲನೆ ಮಾಡುವ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಈ ಕೆಳಕಾಣಿಸಿದಂತೆ ಬಿಪಿಎಲ್ ಪಡಿತರ ಕಾರ್ಡ್ ಹೊಂದಲು ಅರ್ಹತೆ ಹೊಂದಿರುವುದಿಲ್ಲ.

ಆದಾಯ ತೆರಿಗೆ ಪಾವತಿ ಕುಟುಂಬಗಳು, ಒಂದೇ ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬಗಳು, ಕುಟುಂಬ ಆದಾಯ ರೂ.1.20 ಲಕ್ಷ ಹಾಗೂ ಅದಕ್ಕಿಂತ ಹೆಚ್ಚು ಇರುವ ಕುಟುಂಬಗಳು, ಸರ್ಕಾರಿ ನೌಕರರು, ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು, ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಸ್ವಂತ ಪಕ್ಕಾ ಮನೆಯನ್ನು ಹೊಂದಿರುವ ಕುಟುಂಬಗಳು, ಜೀವನೋಪಾಯಕ್ಕೆ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ, ಟ್ರ್ಯಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ, ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲ ಕುಟುಂಬಗಳು.

ಈ ಮೇಲಿನ ಅಂಶಗಳನ್ವಯ ಬಿಪಿಎಲ್ ಪಡಿತರ ಕಾರ್ಡ್ ಹೊಂದಲು ಅನರ್ಹರಾಗಿದ್ದು, ಬಿಪಿಎಲ್ ಕಾರ್ಡ್ ಹೊಂದಿದ್ದಲ್ಲಿ ಆಗಸ್ಟ್ 31ರೊಳಗಾಗಿ ಸ್ವಯಂ ಪ್ರೇರಣೆಯಿಂದ ಆಯಾಯ ತಹಸೀಲ್ದಾರ ಕಚೇರಿಗೆ ತೆರಳಿ ನಿಮ್ಮ ಪಡಿತರ ಕಾರ್ಡನ್ನು ಹಿಂದಿರುಗಿಸಬೇಕು. ಒಂದು ವೇಳೆ ಈ ಅವಧಿಯ ನಂತರವೂ ಸಹ ಬಿಪಿಎಲ್ ಕಾರ್ಡ್ ಹೊಂದಿರುವುದು ಪರಿಶೀಲನೆ ಸಮಯದಲ್ಲಿ ಕಂಡು ಬಂದಲ್ಲಿ ಪಡಿತರ ಕಾರ್ಡ್ ರದ್ದುಪಡಿಸಿ ಪಡಿತರ ಚೀಟಿಯ ಸದಸ್ಯರಿಗನುಗುಣವಾಗಿ ಎಷ್ಟು ಅಕ್ಕಿ ಪಡೆದಿದ್ದಾರೆ ಎಂದು ಲೆಕ್ಕ ಹಾಕಿ ಮುಕ್ತ ಮಾರುಕಟ್ಟೆ ದರದಂತೆ ನಿಯಮಾನುಸಾರ ದಂಡ ವಿಧಿಸಲಾಗುವುದೆಂದು ಹಾಗೂ ಕರ್ನಾಟಕ ಪ್ರಿವೆನ್ಷನ್ ಆಫ್ ಅನ್ ಆಥರೈಸಡ್ ಪೊಸಿಷನ್ ಆಫ್ ರೇಶನ್ ಕಾರ್ಡ್ ಆರ್ಡರ್-1977 ಪ್ರಕಾರ ಜಿಲ್ಲಾಧಿಕಾರಿ ಗೋವಿಂದರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# NMMS ಪರೀಕ್ಷೆಗೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

Department of School Education & Literacy, ನವದೆಹಲಿ ರವರ ಮಾರ್ಗಸೂಚಿಯಂತೆ NMMS ಪರೀಕ್ಷೆಯನ್ನು 2024ನೇ ಡಿಸೆಂಬರ್ 8 ರಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯ ಕೆ.ಎಸ್.ಕ್ಯು.ಎ.ಎ.ಸಿ ವತಿಯಿಂದ ನಡೆಸಲು ಅನ್ ಲೈನ್ ಮೂಲಕ 2024ನೇ ಆಗಸ್ಟ್ 19 ರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ

NMMS ಪರೀಕ್ಷೆಯನ್ನು ಸರ್ಕಾರಿ, ಅನುದಾನಿತ ಮತ್ತು ಸ್ಥಳೀಯ ಸಂಸ್ಥೆ (Local body schools) ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿದ್ದು, ವಿದ್ಯಾರ್ಥಿ ವೇತನ ನೀಡುವುದು ಈ ಯೋಜನೆಯ ಉದ್ದೇಶವಾಗಿದೆ. ಸದರಿ ಪರೀಕ್ಷೆಯ ಆನ್‌ಲೈನ್ ಅರ್ಜಿಯು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯ https://kseab.karnataka.gov.in/ ವೆಬ್ ಸೈಟ್ ನಲ್ಲಿ ಲಭ್ಯಮಾಡಲಾಗಿದೆ.

ಶಾಲಾ ಮುಖ್ಯ ಶಿಕ್ಷಕರು ತಮ್ಮ ಶಾಲೆಯ ವಿದ್ಯಾರ್ಥಿಗಳ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಮಂಡಳಿಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ NMMS ಲಾಗಿನ್‌ನಲ್ಲಿ ಸಲ್ಲಿಸುವುದು. ಆನ್‌ಲೈನ್ ಅರ್ಜಿ ಸಲ್ಲಿಸಲು 2024ನೇ ಸೆಪ್ಟೆಂಬರ್ 5 ಕೊನೆಯ ದಿನಾಂಕವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮಂಡಳಿಯ ವೆಬ್‌ಸೈಟ್‌ನಲ್ಲಿ ಲಭ್ಯ ಮಾಡಲಾಗಿರುವ ಸುತ್ತೋಲೆಯನ್ನು ಗಮನಿಸುವುದು ಹಾಗೂ ಕೆ.ಎಸ್.ಕ್ಯು.ಎ.ಎ.ಸಿ ಕಚೇರಿಯ ಸ್ಥಿರ ದೂರವಾಣಿ ಸಂಖ್ಯೆ: 080-23341615 ಅನ್ನು ಕಚೇರಿ ಕೆಲಸದ ಅವಧಿಯಲ್ಲಿ ಸಂಪರ್ಕಿಸಬಹುದು.

ಇಲಾಖೆಯ ಜಿಲ್ಲಾ ಉಪನಿರ್ದೇಶಕರು ಹಾಗೂ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ಮುಖ್ಯ ಶಿಕ್ಷಕರ ಸಭೆ ಕರೆದು ಸದರಿ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಸಂಬಂಧ ಸೂಕ್ತ ಮಾರ್ಗದರ್ಶನ ಹಾಗೂ ವ್ಯಾಪಕ ಪ್ರಚಾರ ಮಾಡಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಲು ಅಗತ್ಯ ಕ್ರಮ ಕೈಗೊಳ್ಳಲು ಪ್ರಕಟಣೆ ತಿಳಿಸಿದೆ.

# ಇಂದಿನ ನೀರು ಪೂರೈಕೆ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಜುಲೈ 21 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು ಎಂದು ನಗರಸಭೆ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳಗಳ ವಿವರ

ವಾರ್ಡ್ ನಂ. 22 ಲೀಡ್ಕರ್ ಬಡಾವಣೆ ಅಪಾರ್ಟ್‌ಮೆಂಟ್, ಉಳಿದ ಕೆಲವು ಭಾಗಗಳು. ವಾರ್ಡ್ ನಂ. 34, 30 ವಡ್ಡರಗೇರಿ, 46 ಪ್ಲಾಟ್, ಮೂರುಶಿಳ್ಳಿನ ವಕಾರ, ಡಿಪೋ ಹಿಂದಿನ ಭಾಗ, ಬಸವೇಶ್ವರ ಶಾಲೆ, ಶಿವಾನಂದ ಗಾರ್ಡನ್, 1 ನೇ ಕ್ರಾಸ್, ಮಸೂತಿ ಲೈನ್, ಉಳಿದ ಕೆಲವು ಭಾಗಗಳು. ವಾರ್ಡ್ ನಂ. 26 ಕಲಾಮಂದಿರ ರೋಡ್, ಜೆಟಿ ಮಠದ ರೋಡ್, ಅಕ್ಕನ ಬಳಗ.

ವಾರ್ಡ್ ನಂ. 21, 22, 23 ಕಗನಳ್ಳಿ, ಆರೋಗೇರಿ, ಹೊನ್ನೆತ್ತಮ್ಮ ಭಾಗ-2, ಹೆಬಸೂರ, 3 ನಂಬರ್ ಶಾಲೆ, ಸೋಮನಗೌಡ್ರ, ಲಕ್ಕುಂಡಿಯವರ, ಮಾನ್ವಿಯವರ, ಹಕ್ಕಿಯವರ, ಬಾಳಿಕಾಯಿಯವರ ಲೈನ್‌ಗಳು, ಗೆಳೆಯರ ಬಳಗ, ಮಡಿವಾಳರವರ ಲೈನ್, ಈಟಿಯವರ ಭಾಗ-2, ಗುಡಿಯವರ, ಗೌಳಿಯವರ ಲೈನ್ ಶಾಂತವನ ಅಡ್ಡೆ, ಅಂಗನವಾಡಿ, ಗಣಪತಿ ಗುಡಿ.

ವಾರ್ಡ್ ನಂ. 29 ಭಾಂಡಗೆ ಲೈನ್, ಪರಸು ಅವರ ಲೈನ್, ಪಾಪಡೆ ಲೈನ್, ಬನ್ನಿಕಟ್ಟಿ ಕೆಲವು ಉಳಿದ ಭಾಗಗಳು. ವಾರ್ಡ್ ನಂ. 11 ನಿಸರ್ಗ ಬಡಾವಣೆ, ನಾಗಪ್ಪನ ಕಟ್ಟಿ, ಹನುಮಂತ ದೇವರ ಗುಡಿ ಲೈನ್, ಗಾಣಿಗೇರ ಲೈನ್, ರಿಂಗ ರೋಡ್, ಕಾಶಿ ವಿಶ್ವನಾಥ ಗುಡಿ ಲೈನ್, ಶಿವಬಸವ ನಗರ ಕೆಲವು ಉಳಿದ ಭಾಗಗಳು.

ವಾರ್ಡ್ ನಂ. 27, 30 ಕಾಶಿ ವಿಶ್ವನಾಥ ನಗರ, ಅಸೂಟಿ ಅವರ ಲೈನ್, ಕಣವಿಯವರ ಲೈನ್, ದುರ್ಗಮ್ಮ ಗುಡಿ, ಮಾಳಕೋಟೇಶ್ವರ, ವಿ ಆರ್ ಎಲ್ ಆಫೀಸ್, ಮುತ್ತಿನಪೆಂಡಿಮಠ, ಅಬ್ಬಿಗೇರಿ ಲೇಔಟ್, ಪಾಶಿಯವರ, ರೋಣದರವರ ಲೈನ್, ಕೇಶವ ನಗರ, ಸಂಕಣ್ಣವರ ಲೈನ್, ಎಸ್ಪಿ ಆಫೀಸ್, ಪೊಲೀಸ್ ಕ್ವಾರ್ಟರ್ಸ್, ಟಿವಿಎಸ್ ಶೋರೂಮ್.

ತುಂಗಭದ್ರಾ ನದಿಯಿಂದ ಪೂರೈಕೆ ಮಾಡಿದ ನೀರನ್ನು ಸಂಗ್ರಹಣೆ ಮಾಡಿದ ನಂತರ ಹೊಸ ನೀರು ಸಂಗ್ರಹವಾಗಿರುವುದರಿಂದ ಕಡ್ಡಾಯವಾಗಿ ಕಾಯಿಸಿ ಆರಿಸಿ ಕುಡಿಯಲು ಉಪಯೋಗಿಸತಕ್ಕದ್ದು ಎಂದು ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವೀರಭದ್ರೇಶ್ವರ, ಭದ್ರಕಾಳಿ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಅಡ್ನೂರ ಶ್ರೀಗಳು

# ಪಾಲಕರು ಮಕ್ಕಳಿಗೆ ಸಂಸ್ಕಾರ ರೂಢಿಸಿ

■ವಿಜಯಸಾಕ್ಷಿ ಸುದ್ದಿ, ಗದಗ

ಪಾಲಕ-ಪೋಷಕರು ತಮ್ಮ ಮಕ್ಕಳಿಗೆ ಧಾರ್ಮಿಕ, ನೈತಿಕ ಸಂಸ್ಕಾರ ನೀಡಬೇಕು. ಆಚಾರ-ವಿಚಾರ, ಸಂಸ್ಕಾರ-ಸಂಸ್ಕೃತಿಯಿಂದಾಗಿ ಮಕ್ಕಳು ಸುಸಂಸ್ಕೃತರಾಗಿ ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಧ್ಯವಾಗುವದು ಎಂದು ಅಡ್ನೂರ ರಾಜೂರ-ಗದಗ ಬೃಹನ್ಮಠದ ಪೂಜ್ಯ ಷ.ಬ್ರ ಅಭಿನವ ಪಂಚಾಕ್ಷರ ಶಿವಾಚಾರ್ಯ ಸ್ವಾಮಿಗಳು ಹೇಳಿದರು.

ಅವರು ಗದುಗಿನ ಬಸವೇಶ್ವರ ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ನೂತನ ಶ್ರೀ ವೀರಭದ್ರೇಶ್ವರ ಶ್ರೀ ಭದ್ರಕಾಳಮ್ಮದೇವಿ ಮೂರ್ತಿಯ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮ ನೆರವೇರಿಸಿ ದಾನಿಗಳ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.



ನೂತನ ಮೂರ್ತಿಗಳಿಗೆ ಪ್ರಾಣ ಪ್ರತಿಷ್ಠಾಪನೆ ಮಾಡಿದರೆ ಅವುಗಳು ದೇವರು ಎಂದೆನಿಸಿಕೊಂಡು ಭಕ್ತರು ಪೂಜಿಸಿ ಆರಾಧಿಸುತ್ತಾರೆ. ಅದರಂತೆ ಹಿರಿಯರು ಮಕ್ಕಳಿಗೆ ಸಂಸ್ಕಾರ, ಸಂಸ್ಕೃತಿ ನೀಡಿದರೆ ಅವರು ಆದರ್ಶ ವ್ಯಕ್ತಿಗಳಾಗಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗುತ್ತಾರೆ. ವೀರಭದ್ರೇಶ್ವರ-ಭದ್ರಕಾಳಮ್ಮದೇವಿಯ ಹೊಸ ಮೂರ್ತಿಗಳು ಆಕರ್ಷಕ ಹಾಗೂ ಭಕ್ತಿಭಾವವನ್ನು ಸ್ಫುರಿಸುವಂತಿವೆ ಎಂದು ಬಣ್ಣಿಸಿದರು.

ಬಸವೇಶ್ವರ ನಗರದವರು ಪುರಾಣ, ಪ್ರವಚನ, ಧಾರ್ಮಿಕ ಕಾರ್ಯ ಚಟುವಟಿಕೆಗಳನ್ನು ನಡೆಸುವಲ್ಲಿ ಹಿರಿಯರ ಮಾರ್ಗದರ್ಶನದಲ್ಲಿ ಯುವಕರ ಪಡೆ, ಮಹಿಳಾ ಸಮಿತಿ ಕ್ರಿಯಾಶೀಲತೆಯಿಂದ ಕೆಲಸ ಮಾಡುತ್ತಿದ್ದು, ಬರಲಿರುವ ದಿನಗಳಲ್ಲಿ ಈ ಪ್ರಮಾಣ ಇನ್ನೂ ಹೆಚ್ಚಾಗಲಿ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಟ್ರಸ್ಟಿ ರಾಚಪ್ಪ ಮಿಣಜಗಿ ಮಾತನಾಡಿ, ಎಲ್ಲ ಟ್ರಸ್ಟಿಗಳ, ಹಿರಿಯರ, ಯುವಕರ ಹಾಗೂ ಮಹಿಳಾ ಸಮಿತಿಯ ಸಹಕಾರದೊಂದಿಗೆ ದೇವಸ್ಥಾನದ ಎಲ್ಲ ಕಾರ್ಯಕ್ರಮಗಳು, ಅಭಿವೃದ್ಧಿ ಕಾರ್ಯಗಳು ಸಾಂಗವಾಗಿ ಸಾಗಿಬಂದಿದ್ದು, ಸಹಕಾರ ನೀಡಿದವರು ಹಾಗೂ ದಾನಿಗಳು ಅಭಿನಂದನಾರ್ಹರು ಎಂದರು.

ವರದಾನೇಶ್ವರಿ ಮಹಿಳಾ ಮಂಡಳದ ಸದಸ್ಯರು ಪ್ರಾರ್ಥಿಸಿದರು. ಶಂಭು ಕಾರಕಟ್ಟಿ ಸ್ವಾಗತಿಸಿದರು. ಸುರೇಖಾ ಪಿಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನಗರಸಭಾ ಸದಸ್ಯ ಚಂದ್ರು ತಡಸದ ಸಂದರ್ಭೋಚಿತವಾಗಿ ಮಾತನಾಡಿದರು.

> ಆಧುನಿಕತೆಯ ಭರಾಟೆಯಲ್ಲಿ ಜನತೆ ಅದರಲ್ಲೂ ಯುವ ಜನಾಂಗ ಧರ್ಮ-ಆಧ್ಯಾತ್ಮದಿಂದ ವಿಮುಖರಾಗುತ್ತಿರುವುದು ಸರಿಯಾದ ಕ್ರಮ ಅಲ್ಲ. ಧರ್ಮದ ಹಾದಿಯಲ್ಲಿ ಮುನ್ನಡೆಯಬೇಕು. ಆಚಾರ ವಿಚಾರ, ಸಂಸ್ಕಾರಗಳನ್ನು ರೂಢಿಸಿಕೊಳ್ಳಬೇಕು. ಅಂದಾಗ ಮನಸ್ಸು ಶಾಂತ, ಪ್ರಸನ್ನ ಚಿತ್ತವಾಗಿರುತ್ತದೆ. ಚಂಚಲ ಮನಸ್ಸು ದೂರವಾಗಿ ಸಾಧನೆಯ ಮಾರ್ಗದೆಡೆಗೆ ಸಾಗಲು ಸಾಧ್ಯವಾಗುತ್ತದೆ.
>
> – ಷ.ಬ್ರ ಅಭಿನವ ಪಂಚಾಕ್ಷರ ಶಿವಾಚಾರ್ಯ ಸ್ವಾಮಿಗಳು.

ಮೂರ್ತಿ ಸ್ಥಾಪನೆಗಾಗಿ ಉದಾರ ದೇಣಿಗೆ ನೀಡಿದ ಎಲ್ಲ ದಾನಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ವೇದಿಕೆಯ ಮೇಲೆ ಹಿರಿಯ ಟ್ರಸ್ಟಿಗಳಾದ ಶಿವಪುತ್ರಪ್ಪ ಬೇವಿನಮರದ, ಸುರೇಶ ಶಿರಿಗಣ್ಣವರ, ಪ್ರದೀಪ ಕೋಡೇಕಲ್ಲ, ಅರುಣ ಮುನವಳ್ಳಿ, ಮಹೇಶ ಗಡಾದ, ಶೈಲಾ ಕೋಡೇಕಲ್ಲ, ಯಂಡಿಗೇರಿ, ಮೂರ್ತಿ ಕಲಾವಿದ ರಾಘವೇಂದ್ರಆಚಾರ್ಯ ಶಿಲ್ಪಿ ಉಪಸ್ಥಿತರಿದ್ದರು. ಜ್ಯೋತಿ ಹೆರಲಗಿ ನಿರೂಪಿಸಿ ವಂದಿಸಿದರು.

## ನಾಳೆ ಕಲ್ಯಾಣ ಮಹೋತ್ಸವ


ಆ.22ರಿಂದ 30ರವರೆಗೆ ಶ್ರೀ ವೀರಭದ್ರೇಶ್ವರ ಭದ್ರಕಾಳಿ ದೇವರ ಕಲ್ಯಾಣ ಮಹೋತ್ಸವ ಹಾಗೂ ಮಹಾರಥೋತ್ಸವ ಕಾರ್ಯಕ್ರಮಗಳು ಜರುಗುವವು. ಆ. 22ರಂದು ಮಧ್ಯಾಹ್ನ 12.45ಕ್ಕೆ ವೀರಭದ್ರೇಶ್ವರ ಭದ್ರಕಾಳಿ ಸಮೇತ ಕಲ್ಯಾಣ ಮಹೋತ್ಸವ, ಸಂಜೆ ಕಳಸಾರೋಹಣ, ಗ್ರಾಮದೇವತೆಗಳಿಗೆ ಉಡಿ ತುಂಬುವ ಕಾರ್ಯಕ್ರಮ ಹಾಗೂ ದೀಪಸ್ತಂಭಗಳಿಗೆ ದೀಪೋತ್ಸವವ ಜರುಗುವದು.

# ನಾಡಿಗೆ ಶಿವಶರಣೆಯರ ಕೊಡುಗೆ ಅಪಾರ

■ವಿಜಯಸಾಕ್ಷಿ ಸುದ್ದಿ, ಮುಳಗುಂದ

12ನೇ ಶತಮಾನದಲ್ಲಿನ ಶಿವಶರಣೆಯರ ಕೊಡುಗೆ ಅಪಾರವಾಗಿದೆ ಎಂದು ಉಪನ್ಯಾಸಕಿ ಸುಮಿತ್ರಾ ಬಿನ್ನಾಳ ಹೇಳಿದರು.

ಅವರು ಪಟ್ಟಣದ ಬಾಲಲೀಲಾ ಮಹಾಂತ ಶಿವಯೋಗಿಗಳ ಗವಿಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಪುರಾಣ ಪ್ರವಚನದಲ್ಲಿ ಉಪನ್ಯಾಸ ನೀಡಿ, ಶರಣ ಸಾಹಿತ್ಯ, ಮಹಿಳಾ ಸಾಹಿತ್ಯ, ವಚನಗಳ ಮೂಲಕ ಧರ್ಮಪ್ರಸಾರ, ಜಾಗೃತಿ ಹಾಗೂ ಸಾಮಾಜಿಕ ಕ್ರಾಂತಿಯ ಮೂಲಕ ನಾಡಿಗೆ ಶಿವಶರಣೆಯರು ಸಾಕಷ್ಟು ಕೊಡುಗೆ ನೀಡಿದ್ದು ಇಂದಿಗೂ ಪ್ರಸ್ತುತವಾಗಿದೆ. ಶರಣೆಯರು ಕಾಯಕ ತತ್ವ ಪರಿಪಾಲಕರಾಗಿ, ಯಾವ ಬಂಧನಕ್ಕೂ ಒಳಗಾಗದೆ ಪರಿಸರ ಕಾಳಜಿ, ಸಾಮಾಜಿಕ ಚಿಂತನೆಗಳ ಮೂಲಕ ನಾಡಿಗೆ ಸಾಕಷ್ಟು ಕೊಡುಗೆ ನೀಡಿದ್ದು, ಇಂದಿನ ಯುವಕ-ಯುವತಿಯರು ವಚನ ಸಾಹಿತ್ಯಗಳನ್ನು ಓದುವುದರಿಂದ ಬದುಕು ಹಸನಾಗುತ್ತದೆ ಎಂದರು.



# ಆರೋಗ್ಯ ಜಾಗೃತಿ ಶಿಬಿರ ನಾಳೆ

■ವಿಜಯಸಾಕ್ಷಿ ಸುದ್ದಿ, ಗದಗ

ಟೀಮ್ ಒನ್ ಇಂಡಿಯಾ ಸಂಸ್ಥೆ, ಅಕ್ಕನ ಬಳಗ ಮತ್ತು ಸದ್ಭಾವನಾ ಗ್ರಾಮೀಣಾಭಿವೃದ್ಧಿ ಶಿಕ್ಷಣ ಸಂಸ್ಥೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಆರೋಗ್ಯ ಜಾಗೃತಿ ಶಿಬಿರವನ್ನು ಆಗಸ್ಟ್ 22ರಂದು ಬೆಳಿಗ್ಗೆ 10.30ಕ್ಕೆ ನಗರದ ಅಕ್ಕನ ಬಳಗ (ತೋಂಟದಾರ್ಯ ಮಠದ)ದಲ್ಲಿ ಆಯೋಜಿಸಲಾಗಿದೆ.

ಈ ಶಿಬಿರದ ಮುಖ್ಯ ಉದ್ದೇಶ, ರೋಗದಿಂದ ದೂರವಿದ್ದು ಆರೋಗ್ಯಕರ ಬದುಕಿಗೆ ನಾವು ಮಾಡಲೇಬೇಕಾಗಿರುವ ನಮ್ಮ ಪ್ರಯತ್ನಗಳ ಬಗ್ಗೆ ಅರಿವು ಮೂಡಿಸುವುದಾಗಿದೆ. ಈ ಆರೋಗ್ಯ ಜಾಗೃತಿ ಶಿಬಿರ ಸಂಪೂರ್ಣ ಉಚಿತವಾಗಿದ್ದು, ಗದಗ-ಬೆಟಗೇರಿ ನಗರದ ಜನತೆ ಶಿಬಿರದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಸದ್ಭಾವನಾ ಗ್ರಾಮೀಣಾಭಿವೃದ್ಧಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಪ್ರಭುರಾಜಗೌಡ ಪಾಟೀಲ ಪ್ರತಿಕಾ ಪ್ರಕಟನೆಯ ಮೂಲಕ ತಿಳಿಸಿದ್ದಾರೆ.

# ಯಜ್ಞೋಪವೀತ ಧಾರಣೆಯಿಂದ ದೋಷಗಳು ದೂರ



■ವಿಜಯಸಾಕ್ಷಿ ಸುದ್ದಿ, ನರೇಗಲ್

ಶ್ರಾವಣ ಮಾಸದಲ್ಲಿ ಶ್ರಾವಣಿ ಯಜ್ಞೋಪವೀತ ಧಾರಣೆ ಮಾಡುವುದರಿಂದ ಸಂವತ್ಸರದಲ್ಲಿ ತಿಳಿದೋ ತಿಳಿಯದೆಯೋ ಮಾಡಿದ ಪಾಪ, ದೋಷಗಳು ದೂರವಾಗುತ್ತವೆ. ಯಜ್ಞೋಪವೀತ ಧರಿಸಿದ ವ್ಯಕ್ತಿಯ ಮನೋಬಲ ಹೆಚ್ಚುತ್ತದೆ ಎಂದು ವೇ.ಮೂ. ಶ್ರೀವಲಭಶಾಸ್ತ್ರಿ ಸದರಜೋಶಿ ಹೇಳಿದರು.

ಪಟ್ಟಣದ ಶ್ರೀ ದತ್ತಾತ್ರೇಯ ದೇವಸ್ಥಾನದಲ್ಲಿ ಸೋಮವಾರ ಶ್ರಾವಣಿ ಯಜ್ಞೋಪವೀತ ಧಾರಣೆ ಹಾಗೂ ಹೋಮದ ನೇತೃತ್ವ ವಹಿಸಿ ಅವರು ಮಾತನಾಡಿದರು.

ಯಜ್ಞೋಪವೀತವನ್ನು ಧರಿಸಿದ ವ್ಯಕ್ತಿ ಕೆಲವಷ್ಟು ಆಚರಣೆಗಳನ್ನು ಮಾಡಬೇಕಾಗುತ್ತದೆ. ಯಾವುದೇ ಕಾರಣಕ್ಕೆ ಜನಿವಾರ ತುಂಡಾದರೆ ತಕ್ಷಣ ಅದನ್ನು ಬದಲಿಸಬೇಕು. ಅಶೌಚ ಕರ್ಮಾದಿ ಕಾರ್ಯಗಳಿಂದ ಮೈಲಿಗೆಯುಂಟಾದರೆ ಹಳೆಯದನ್ನು ತೆಗೆದು ಹೊಸ ಜನಿವಾರವನ್ನು ಧರಿಸಬೇಕಾದುದು ಯಜ್ಞೋಪವೀತ ಧಾರಣಾಧರನ ಕರ್ತವ್ಯವಾಗಿದೆ ಎಂದರು. ಯಜ್ಞೋಪವೀತದಲ್ಲಿ 9 ಎಳೆಗಳು ಇದ್ದು, ಜೀವಾತ್ಮವನ್ನು ಪ್ರತಿನಿಧಿಸುತ್ತದೆ. ಹಾಗೇ ಬಾಯಿಯಿಂದ ಒಳ್ಳೆಯ ಮಾತು, ಒಳ್ಳೆಯ ಆಹಾರಗಳನ್ನು ಸೇವಿಸಬೇಕು. ಕಣ್ಣಿನಿಂದ ಒಳ್ಳೆಯ ವಿಷಯಗಳನ್ನು ನೋಡಬೇಕು, ಕಿವಿಯಿಂದ ಒಳ್ಳೆಯ ವಿಷಯಗಳನ್ನು ಕೇಳಬೇಕೆಂಬ ತತ್ವವನ್ನೂ ಯಜ್ಞೋಪವೀತ ಸಾರುತ್ತದೆ ಎಂದರು.

ಈ ಸಂದರ್ಭದಲ್ಲಿ ಎ.ಜಿ. ಕುಲಕರ್ಣಿ, ಅರುಣ ಗ್ರಾಮಪುರೋಹಿತ, ಎಸ್.ಎಚ್. ಕುಲಕರ್ಣಿ, ನಾಗೇಶಭಟ್ಟ ಗ್ರಾಮಪುರೋಹಿತ, ಆನಂದ ಕುಲಕರ್ಣಿ, ಅಜಿತ ಕುಲಕರ್ಣಿ, ಮುಕುಂದ ಸೂರ್ಯಭಟ್, ಆನಂದ ಕಾಳೆ, ಪ್ರಶಾಂತ ಗ್ರಾಮಪುರೋಹಿತ, ನಾಗರಾಜ ನಾಡಗೇರ, ಪೃಥ್ವಿ ಕುಲಕರ್ಣಿ, ರಾಮಕೃಷ್ಣ ಸದರಜೋಶಿ ಸೇರಿದಂತೆ ಸಮಾಜದವರಿದ್ದರು.


### ಕರ್ನಾಟಕ ಸ್ಪೋರ್ಟ್ಸ್ ಅಕಾಡೆಮಿಯಿಂದ ಕೆ.ಎಚ್. ಪಾಟೀಲ ಪುಟ್ಬಾಲ್ ಲೀಗ್ ಸೀಸನ್-2

# ರೋಚಕ ಪಂದ್ಯಗಳ ರಸದೌತಣ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಸ್ಪೋರ್ಟ್ಸ್ ಆ್ಯಂಡ್ ಎಜುಕೇಶನ್ ಅಕಾಡೆಮಿ ಆಶ್ರಯದಲ್ಲಿ ನಡೆಯುತ್ತಿರುವ ಕೆ.ಎಚ್. ಪಾಟೀಲ ಪುಟ್ಬಾಲ್ ಲೀಗ್‌ನ ಪಂದ್ಯಾವಳಿಗಳಲ್ಲಿ ಮೊದಲನೇ ಪಂದ್ಯ ಅನ್‌ಬೀಟೆಬಲ್ ಮತ್ತು ಡಿಫೆಂಡರ್ಸ್ ತಂಡಗಳ ನಡುವೆ ನಡೆದು ಡಿಫೆಂಡರ್ಸ್ ತಂಡದ ಅರ್ಜುನ ಒಂದು ಗೋಲನ್ನು ಹೊಡೆದು 0-1 ಗೋಲುಗಳಿಂದ ಡಿಫೆಂಡರ್ಸ್ ತಂಡ ಗೆಲುವು ಸಾಧಿಸಿತು. ಪಂದ್ಯ ಶ್ರೇಷ್ಠ ಪ್ರಶಸ್ತಿಯನ್ನು ಡಿಫೆಂಡರ್ಸ್ ತಂಡದ ಅರ್ಜುನ ಪಡೆದುಕೊಂಡರು.

ಎರಡನೇ ಪಂದ್ಯ ಕಿಕ್ಕರ್ಸ್ ಮತ್ತು ರೇಬಲ್ ಪಂದ್ಯಗಳ ನಡುವೆ ನಡೆದು 2-3 ಗೋಲುಗಳಿಂದ ರೇಬಲ್ ತಂಡ ಗೆಲುವು ಸಾದಿಸಿತು. ರೇಬಲ್ ತಂಡದ ಪರವಾಗಿ ರಾಘು ಮುಂಡರಗಿ 2 ಗೋಲುಗಳನ್ನು ಹೊಡೆದು ಪಂದ್ಯ ಶ್ರೇಷ್ಠ ಪ್ರಶಸ್ತಿಯನ್ನು ಪಡೆದುಕೊಂಡರು.



ಮೂರನೇ ಪಂದ್ಯ ಟರ್ಮಿನೇಟರ್ಸ್ ಮತ್ತು ಕಾಂಕರ್ಸ್ ನಡುವೆ ನಡೆದು, 0-1 ಗೋಲುಗಳಿಂದ ಕಾಂಕರ್ಸ್ ತಂಡ ಗೆಲುವು ಸಾಧಿಸಿತು. ಪಂದ್ಯ ಶ್ರೇಷ್ಠ ಪ್ರಶಸ್ತಿಯನ್ನು ಕಾಂಕರ್ಸ್ ತಂಡದ ಚಂದ್ರು ಪಡೆದುಕೊಂಡರು.

ನಾಲ್ಕನೇ ಪಂದ್ಯ ವಾರಿಯರ್ಸ್ ಮತ್ತು ಸೈಲೈನ್ ಇ ಪಂದ್ಯದಲ್ಲಿ ವಾರಿಯರ್ಸ್ ತಂಡದ ಪರವಾಗಿ ವಿನಾಯಕ ಹಿರೇಮಠ ಹಾಗೂ ಸ್ಯಾಮ್‌ಸನ್ ಡಾನ್ ತಲಾ 1 ಗೋಲನ್ನು ಹೊಡೆದು ಪಂದ್ಯವನ್ನು ಗೆಲ್ಲಿಸಿಕೊಟ್ಟರು. ಪಂದ್ಯ ಶ್ರೇಷ್ಠ ಪ್ರಶಸ್ತಿಯನ್ನು ವಾರಿಯರ್ಸ್ ತಂಡದ ಸ್ಯಾಮಸನ್ ಡಾನ್ ಪಡೆದುಕೊಂಡರು.

ಐದನೇ ಪಂದ್ಯ ಅವೆಂಜರ್ಸ್ ಮತ್ತು ಸ್ಟ್ರೈಕರ್ಸ್ ನಡುವೆ ಹಣಾಹಣಿ ನಡೆದು 1-1 ಗೋಲುಗಳಿಂದ ಪಂದ್ಯ ಡ್ರಾ ಆಯಿತು. ಪಂದ್ಯ ಶ್ರೇಷ್ಠ ಪ್ರಶಸ್ತಿಯನ್ನು ಶ್ರೀಶೈಲ್ ಪಡೆದುಕೊಂಡರು.

ಆರನೇ ಪಂದ್ಯ ಮಾಸ್ಟರ್ಸ್-ಹಸಲರ್ಸ್ ನಡುವೆ ನಡೆದು 1-1 ಗೋಲುಗಳಿಂದ ಪಂದ್ಯ ಡ್ರಾ ಆಯಿತು. ಪಂದ್ಯ ಶ್ರೇಷ್ಠ ಪ್ರಶಸ್ತಿಯನ್ನು ಶಶಿ ಮುಂಡರಗಿ ಪಡೆದುಕೊಂಡರು. ಕೃಷ್ಣಗೌಡ ಪಾಟೀಲ ಹಾಗೂ ಸಚಿನ್ ಪಾಟೀಲ ಮಾರ್ಗದರ್ಶನದಲ್ಲಿ ಎಲ್ಲ ಪಂದ್ಯಗಳು ನಡೆದವು.

ಕರ್ನಾಟಕ ಸ್ಪೋರ್ಟ್ಸ್ ಆ್ಯಂಡ್ ಎಜುಕೇಶನ್ ಅಕಾಡೆಮಿಯ ಅಧ್ಯಕ್ಷ ಸರ್ಫರಾಜ ಶೇಖ ಅವಳಿ ನಗರದ ಜನತೆಯ ಉತ್ಸಾಹ ಇದೇ ರೀತಿ ಮುಂದುವರೆಯಲೆಂದು ವಿನಂತಿಸಿದರು. ಗದಗ-ಬೆಟಗೇರಿ ಅವಳಿ ನಗರದಲ್ಲಿ ನಿರ್ಮಿಸಿರುವ ಹಾಕಿ ಮೈದಾನದಲ್ಲಿ ಹಾಕಿ ಪಂದ್ಯಾವಳಿಗಳನ್ನು ಆಯೋಜಿಸುವುದಾಗಿ ಎಮ್.ಸಿ. ಶೇಖ ತಿಳಿಸಿದರು.

### ಕದಳಿಶ್ರೀ ವೇದಿಕೆಯಿಂದ ಅಮೃತ ಭೋಜನ, ಕಲಿಕಾ ಸಾಮಗ್ರಿ ವಿತರಣೆ

# ಮಕ್ಕಳ ಮನಸ್ಸು ಹದವಾದ ಭೂಮಿ

■ವಿಜಯಸಾಕ್ಷಿ ಸುದ್ದಿ, ಗದಗ

ಬೀಜ ಮೊಳೆತು ಫಲವಾಗಿ ಬೆಳೆಯಬೇಕಾದರೆ ಹದವಾದ ಭೂಮಿಯಲ್ಲಿ ನಾವು ಬೀಜವನ್ನು ಬಿತ್ತಬೇಕು. ಹಾಗೆಯೇ ಮಕ್ಕಳ ಮನಸ್ಸು ಹದವಾದ, ಫಲವತ್ತಾದ ಭೂಮಿಯಾಗಿದ್ದು ಜ್ಞಾನದ ಬೀಜಗಳನ್ನು, ಮೌಲ್ಯಗಳನ್ನು ನಾವು ಬಿತ್ತಿದರೆ ಮಗು ಉತ್ತಮ ಬದುಕನ್ನು ಬೆಳೆಸಿಕೊಳ್ಳಬಲ್ಲದು. ಅದಕ್ಕಾಗಿ ಶರಣರ, ದಾರ್ಶನಿಕರ ವಚನಗಳ ದಾರಿದೀಪ ಎಂದು ಚಿಂತಕಿ ಸುವರ್ಣ ವಸ್ತ್ರದ ಹೇಳಿದರು.

ಅವರು ಗದಗ ಜಿಲ್ಲಾ ಅಖಿಲ ಭಾರತ ಶರಣ ಸಂಕುಲನದ ಶರಣೆ ಅಕ್ಕಮಹಾದೇವಿಯ ಕದಳಿಶ್ರೀ ವೇದಿಕೆಯಿಂದ ಗದುಗಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ. 16ರಲ್ಲಿ ಜರುಗಿದ ಶ್ರಾವಣದ ಅಮೃತ ಭೋಜನ-ಜ್ಞಾನ ಸಿಂಚನ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡು ಮಕ್ಕಳಿಗೆ ಕಲಿಕಾ ಸಾಮಗ್ರಿ ವಿತರಿಸಿ ಮಾತನಾಡಿದರು.



ಮಕ್ಕಳಿಗೆ ಬಸವಣ್ಣನವರ ವಚನ ಗಾಯನವನ್ನು ಹೇಳಿಸಿದ ಗಾಯಕಿ ಪದ್ಮಾ ಕಬಾಡಿ ಮಾತನಾಡಿ, ವಚನಗಾಯನದಲ್ಲಿ ಮಧುರತೆ ಹೆಚ್ಚು. ಮಕ್ಕಳು ಶರಣರ ವಚನಗಳನ್ನು ರಾಗಬದ್ಧವಾಗಿ ಹಾಡುವ ರೂಢಿ ಮಾಡಿದಲ್ಲಿ ಸಂಗೀತದಲ್ಲಿ ಯಶಸ್ಸು ಕಾಣಬಹುದು ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಲಾ ಮುಖ್ಯೋಪಾಧ್ಯಾಯೆ ಎಂ.ಆರ್. ನೀಲಣ್ಣವರ ಮಾತನಾಡಿ, ಸರ್ಕಾರಿ ಶಾಲೆಗಳ ಮಕ್ಕಳು ಪ್ರತಿಭಾನ್ವಿತರಾಗಿದ್ದು, ಪ್ರತಿಭೆಗೆ ಪ್ರೋತ್ಸಾಹ ನೀಡುವಲ್ಲಿ ಕದಳಿಶ್ರೀ ವೇದಿಕೆಯವರು ಶಾಲೆಗಳಿಗೆ ಆಗಮಿಸಿ ಸಿಹಿಭೋಜನದೊಂದಿಗೆ ಮಕ್ಕಳಿಗೆ ಕಲಿಕಾ ಸಾಮಗ್ರಿ ವಿತರಿಸುತ್ತಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು.

> ಮುಖ್ಯ ಅತಿಥಿ ಬಾಲಕಿಯರ ವಿದ್ಯಾರ್ಥಿ ನಿಲಯದ ಮೇಲ್ವಿಚಾರಕಿ ಸುಜಾತಾ ಪಾಟೀಲ ಮಾತನಾಡಿ, ಶಾಲೆ ಬಿಟ್ಟ ಮಕ್ಕಳು ಕಂಡುಬಂದಲ್ಲಿ ಅವರನ್ನು ಶಾಲೆಗೆ ದಾಖಲಿಸಿಕೊಳ್ಳಬೇಕು. ಅವರಿಗೆ ಹಾಸ್ಟೆಲ್ ವ್ಯವಸ್ಥೆಯನ್ನು ಕಲ್ಪಿಸುವ ಅವಕಾಶವಿದ್ದು, ಮಕ್ಕಳು ಅವಶ್ಯಕತೆ ಇದ್ದರೆ ಹಾಸ್ಟೆಲ್ ಸೇವೆ ಬಳಸಿಕೊಂಡು ಓದು ಮುಂದುವರೆಸಬೇಕು ಎಂದರು.

ಕವಿತಾ ಕಲ್ಮನಿ ಪ್ರಾರ್ಥಿಸಿದರು. ಕೆ.ಎಸ್. ಬೇಲೇರಿ ಸ್ವಾಗತಿಸಿದರು. ಎಸ್.ವೈ. ಮರಕುಂಬಿ ನಿರೂಪಿಸಿ ವಂದಿಸಿದರು. ಯಲ್ಲಮ್ಮ ಡೊಳ್ಳಿನವರ, ಜಾಹೀದಾಬೇಗಂ ತಹಸೀಲ್ದಾರ, ರೇಣುಕಾ ಸೋಮಣ್ಣವರ, ಸಾಹೀರಾಭಾನು ಶಹಪೂರ ಮುಂತಾದವರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka